# ಹಂಪಿ ಟೈಮ್ಸ್

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

HAMPI TIMES

ಕನ್ನಡ ದಿನಪತ್ರಿಕೆ
KANNADA DAILY



ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ.

ಹಂಪಿ ಟೈಮ್ಸ್ ಇ-ಪೇಪರ್ ಓದುಗರ ಸಂಖ್ಯೆ

60,000 Plus readers

94486 33038

NEWSPAPER AD- THE BEST ADVERTISING PLATFORM TO BOOST YOUR BUSINESS

hampitimes@gmail.com Valmiki Circle, Hosapete-583201



ಸಂಪುಟ:01 • ಸಂಚಿಕೆ:305 • ನೋಂದಣಿ ನಂ.:KARKAN27911 • ವಿಜಯನಗರ • 04.05.2024 • ಶನಿವಾರ • ಪುಟ:04 • ಬೆಲೆ:2

Volume:01 • Issue:305 • Reg.No:KARKAN27911 • VIJAYANAGARA • 04.05.2024 • Saturday • Page:04 • Rs:2


# ಶಿಕ್ಷಕರ, ಪದವೀಧರರ ತಲಾ 3 ಕ್ಷೇತ್ರಗಳಿಗೆ ಚುನಾವಣೆ ಘೋಷಣೆ

## ಜಿಲ್ಲಾಧಿಕಾರಿ ದಿವಾಕರ ಹೇಳಿಕೆ | ಮೇ 9 ರಂದು ಅಧಿಸೂಚನೆ | ನಾಮಪತ್ರ ಸಲ್ಲಿಕೆಗೆ ಮೇ 16 ಕೊನೆದಿನ



**ಹಂಪಿ ಟೈಮ್ಸ್ ಹೊಸಪೇಟೆ**

ಕರ್ನಾಟಕ ವಿಧಾನ ಪರಿಷತ್ತಿನ 03 ಪದವೀಧರರ ಕ್ಷೇತ್ರಕ್ಕೆ ದ್ವೈವಾರ್ಷಿಕ ಚುನಾವಣೆ ಘೋಷಣೆಯಾಗಿದ್ದು, ಮೇ 9ರಂದು ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರು ಅಧಿಸೂಚನೆಯನ್ನು ಹೊರಡಿಸಲಿದ್ದಾರೆ. ಈ ಚುನಾವಣೆಯ ಮಾದರಿ ನೀತಿ ಸಂಹಿತೆಯ ಎಲ್ಲಾ ನಿಬಂಧನೆಗಳನ್ನು ಪಾಲನೆ ಮಾಡಬೇಕು ಎಂದು ಜಿಲ್ಲಾ ಚುನಾವಣಾಧಿಕಾರಿ ಎಂ.ಎಸ್.ದಿವಾಕರ ಹೇಳಿದರು.

ಜಿಲ್ಲಾಡಳಿತ ಭವನದಲ್ಲಿ ಶುಕ್ರವಾರ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿ ಮಾತನಾಡಿದರು. ಭಾರತ ಚುನಾವಣಾ ಆಯೋಗವು ರಾಜ್ಯದ ವಿಧಾನ ಪರಿಷತ್‌ಗೆ ಅವಧಿ ಮುಕ್ತಾಯವಾಗುವ ಮೂರು ಶಿಕ್ಷಕರ ಕ್ಷೇತ್ರಗಳ ಜೊತೆಗೆ ಮೂರು ಪದವೀಧರರ ಕ್ಷೇತ್ರಗಳಿಗೆ ದ್ವೈವಾರ್ಷಿಕ ಚುನಾವಣೆಯನ್ನು ಘೋಷಣೆ ಮಾಡಿದೆ. ಲೋಕಸಭೆಗೆ ನಡೆಯುತ್ತಿರುವ ಸಾರ್ವತ್ರಿಕ ಚುನಾವಣೆ 2024ರ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಈಗಾಗಲೇ ಮಾದರಿ ನೀತಿ ಸಂಹಿತೆಯು ಜಾರಿಯಲ್ಲಿದ್ದು, ಈಗಾಗಲೇ ಜಾರಿಯಲ್ಲಿರುವ ಮಾದರಿ ನೀತಿ ಸಂಹಿತೆಯ ಎಲ್ಲಾ ನಿಬಂಧನೆಗಳು ವಿಧಾನ ಪರಿಷತ್ತಿನ ಚುನಾವಣೆಗಳಿಗೆ ಅನ್ವಯಿಸುತ್ತವೆ ಎಂದು ತಿಳಿಸಿದರು.

ಕರ್ನಾಟಕ ಈಶಾನ್ಯ ಪದವೀಧರರ ಕ್ಷೇತ್ರಕ್ಕೆ ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರು ಚುನಾವಣಾಧಿಕಾರಿಗಳಾಗಿರುತ್ತಾರೆ. ಈ ಚುನಾವಣೆಯ ಸಂಬಂಧ ಭಾರತ ಚುನಾವಣಾ ಆಯೋಗವು ಕಾಲಕಾಲಕ್ಕೆ ಹೊರಡಿಸುವ ಎಲ್ಲಾ ನಿರ್ದೇಶನಗಳನ್ನು ಪಾಲನೆ ಮಾಡಬೇಕು. ಮಾದರಿ ನೀತಿ ಸಂಹಿತೆ ಉಲ್ಲಂಘನೆಯಾಗದಂತೆ ನೋಡಿಕೊಳ್ಳಬೇಕು ಎಂದು ತಿಳಿಸಿದರು.

> ನಾಮಪತ್ರಗಳ ಸಲ್ಲಿಕೆಗೆ ಮೇ16 ಕೊನೆಯ ದಿನವಾಗಿದೆ. ಮೇ17 ರಂದು ನಾಮಪತ್ರಗಳ ಪರಿಶೀಲನೆ, ನಾಮಪತ್ರಗಳನ್ನು ಹಿಂಪಡೆಯಲು ಮೇ 20 ಕೊನೆಯ ದಿನವಾಗಿದೆ. ಜೂನ್ 3 ರಂದು ಬೆಳಗ್ಗೆ 8 ಗಂಟೆಯಿಂದ ಸಂಜೆ 4 ಗಂಟೆವರೆಗೆ ಮತದಾನ ನಡೆಯಲಿದೆ. ಜೂನ್ 6 ರಂದು ಮತ ಎಣಿಕೆ. ಸದರಿ ಚುನಾವಣೆಯ ಪ್ರಕ್ರಿಯೆಯು ಜೂನ್ 12ರೊಳಗೆ ಮುಕ್ತಯವಾಗಲಿದೆ
>
> – ಎಂ.ಎಸ್.ದಿವಾಕರ. ಜಿಲ್ಲಾಧಿಕಾರಿ

**ಮೇ 6 ಕೊನೆಯ ದಿನ:** ಕರ್ನಾಟಕ ವಿಧಾನ ಪರಿಷತ್ತಿನ ಪದವೀಧರರ ಕ್ಷೇತ್ರದ ಮತದಾರರ ಪಟ್ಟಿಗೆ ಹೆಸರನ್ನು ಸೇರ್ಪಡೆ ಮಾಡಲು ಇಚ್ಛಿಸುವ ಅರ್ಹರು ತಮ್ಮ ಹೆಸರನ್ನು ಸದರಿ ಮತದಾರರ ಪಟ್ಟಿಗೆ ಸೇರ್ಪಡೆ ಮಾಡಲು ಮೇ 6 ಕೊನೆಯ ದಿನವಾಗಿರುತ್ತದೆ. ಅರ್ಹರು ಆಯಾ ತಾಲೂಕು ಕಚೇರಿಗಳಲ್ಲಿ ನೇರವಾಗಿ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಇದೇ ವೇಳೆ ಜಿಲ್ಲಾಧಿಕಾರಿಗಳು ಮಾಹಿತಿ ನೀಡಿದರು. ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಅನುರಾಧ ಜಿ., ಚುನಾವಣಾ ಶಾಖೆಯ ಮನೋಜ ಲಾಡೆ, ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳಾದ ಬಿಜೆಪಿಯ ಮಧುಸೂದನ್, ಕಾಂಗ್ರೆಸ್‌ನ ನಿಂಬಗಲ್ ರಾಮಕೃಷ್ಣ, ಪಿ.ವೀರಾಂಜನೇಯ, ಮಂಜುನಾಥ, ಜೆಡಿಎಸ್‌ನ ಕೆ.ಕೊಟ್ರೇಶ್ ಇದ್ದರು.

# ಯುವ ಮತದಾರರ ಧ್ವನಿ

## ತಪ್ಪದೇ ಮತವನ್ನು ಚಲಾಯಿಸಿ



ಮತದಾನ ಮಹಾದಾನ. ದೇಶದ ಪ್ರಜಾಪ್ರಭುತ್ವ ಸ್ಥಾಪನೆ ನಮ್ಮೆಲ್ಲರ ಬೆರಳ ತುದಿಯಲ್ಲಿ ಇದೆ. ಸಮರ್ಥ ಆಡಳಿತಗಾರನನ್ನು ಆಯ್ಕೆ ಮಾಡುವುದು ನಮ್ಮ ಹೊಣೆಗಾರಿಕೆಯಾಗಿದೆ. ನಮಗೆ ದೊರೆತಿರುವ ಮತದಾನದ ಹಕ್ಕನ್ನು ಸದ್ವಿನಿಯೋಗಿಸಿಕೊಳ್ಳೋಣ. ಮೇ 7 ರಂದು ನಾನು ಮತದಾನ ಮಾಡಲಿದ್ದೇನೆ. ನೀವು ತಪ್ಪದೇ ನಿಮ್ಮ ಹಕ್ಕನ್ನು ಚಲಾಯಿಸಿ, ದಯಮಾಡಿ ಮತದಾನ ಮಾಡಿ.

– ದೀಪಶ್ರೀ ಎಸ್ ಕೂಡ್ಲಿಗಿ.
ಹವ್ಯಾಸಿ ಬರಹಗಾರ್ತಿ

**ಯುವ ಮತದಾರರು ಮತದಾನದ ಅಭಿಪ್ರಾಯಗಳನ್ನು ಕಳಿಸಿ**

**94486 33038**

**Email: hampitimes@gmail.com**

# ಶಕ್ತಿ ದೇವತೆ ಹಂಪಿ ಪಟ್ಟಣದ ಎಲ್ಲಮ್ಮ

ಹಂಪಿ ಅರಮನೆಯ ಸಂಶೋಧನೆಗೆ ಸುಳಿವು ಕೊಟ್ಟ ಶಾಸನ ಪತ್ತೆ, ಹಂಪಿ ಪಟ್ಟಣದ ಎಲ್ಲಮ್ಮ– ಶಾಸನಾಧಾರಿತ ಚರಿತ್ರೆ, ಪಟ್ಟಣದ ಎಲ್ಲಮ್ಮಳ ಬಗ್ಗೆ ದೊರೆತ ಮೊದಲ, ಏಕೈಕ ಶಾಸನ । ಎರಡು ಅರಮನೆಗಳಿರಬಹುದೆಂಬ ಕುತೂಹಲ!, ಅಂದು ಆನೆಗೊಂದಿ ಅರಸರ ವಂಶಸ್ಥರ ಸಮ್ಮುಖದಲ್ಲಿ ಪೂಜೆ । ಕಪ್ಪು ಶಿಲೆಯಲ್ಲಿ ಸುಮಾರು ಆರು ಅಡಿ ಎತ್ತರವಿರುವ ದೇವಿ.

ವಿವರ 3ನೇ ಪುಟದಲ್ಲಿ..



ಪ್ರೊ.ಡಿ.ವಿ.ಪರಮಶಿವಮೂರ್ತಿ
ಕುಲಪತಿಗಳು, ಕನ್ನಡ ವಿ.ವಿ.


ವಿವೇಕಶ್ರೇಯಾಲಾಪ
ಸಂಗೀತ ತರಬೇತಿ
VIVĒKASRĒYĀLĀPA
VEENA INSTRUMENTAL
VOCAL - KARNATIC
AND FILM MUSIC Classes
contact for more information
91082 26938
90368 65666
Near Honda Showroom, Hosapete-583201

House For Sale
3 BHK independent Duplex House with Built Area 2300 sq.ft.
in an extent of 1500 sq.ft. for Sale
at Rajeev Nagar, 2nd Cross, Hospet
(adjacent KSSIDC Industrial Estate)
94409 86570

S.M.TRADERS & SERVICES
ATLAS COPCO
COMPRESSORS, HOSEPIPE,
DRILL RODS,SPARE PARTS Etc.
Contact for Details
96866 63125
96866 63132
96864 13132
Hampi Road, Hosapete-583201

ಮಕ್ಕಳ ಜ್ಞಾನ ವಿಕಾಸಕ್ಕೆ
ಮನೆಗೊಂದು ಕನ್ನಡ ದಿನಪತ್ರಿಕೆ ಇರಲಿ

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ

HAMPI TIMES
Kannada Daily

ಅನಂತನಂತ ಧನ್ಯವಾದಗಳು

ಹಂಪಿ ಟೈಮ್ಸ್ ಪತ್ರಿಕೆ ಸಮಸ್ತ ಓದುಗರಿಗೆ ಮತ್ತು ಲೇಖಕರಿಗೆ, ಜಾಹೀರಾತುದಾರರಿಗೆ ಧನ್ಯವಾದಗಳು.
ನಿಮ್ಮೆಲ್ಲರ ಸಹಕಾರ, ಬೆಂಬಲದಿಂದ ಹಂಪಿ ಟೈಮ್ಸ್ ಇ–ಪೇಪರ್, ವಿಜಯನಗರ ಜಿಲ್ಲೆ, ಕರ್ನಾಟಕದಾದ್ಯಂತ,
ವಿವಿಧ ರಾಜ್ಯ ಹಾಗೂ ಅಮೇರಿಕಾ, ಇಂಗ್ಲೆಂಡ್, ಕೆನಡಾ ಸೇರಿದಂತೆ ಹೊರ ದೇಶಗಳಲ್ಲಿರುವ ಕನ್ನಡ ಓದುಗರ ಮೆಚ್ಚುಗೆಯ ಪತ್ರಿಕೆಯಾಗಿದೆ.

60,000
ಇ–ಪೇಪರ್ ಓದುಗರ ಸಂಖ್ಯೆ

SCAN FOR E-PAPER

E-PAPER READERS
60 Thousand

VIEWS
3.08 Lakh

EVENT COUNT
5.94 Lakh





E-mail: hampitimes@gmail.com | web: hampitimes.com | epaper.hampitimes.com | Cell: 94486 33038

ಹಂಪಿ ಟೈಮ್ಸ್ ಬಳಗ, ಹೊಸಪೇಟೆ, ವಿಜಯನಗರ.

## ಬೆಳಕಿನ ಹಾದಿ

# ಅನ್ಯರ ವಸ್ತು ಪ್ರಾಣಕ್ಕೆ ಆಪತ್ತು

■ ಹಿರೇಮಠದ ಮಲ್ಲಿಕಾ ಬಸರಕೋಡು, ಹಗರಿಬೊಮ್ಮನಹಳ್ಳಿ

ಒಬ್ಬ ಕಳ್ಳನಿದ್ದ. ಅವನು ಯಾರ ಕೈಗೆ ಸಿಗದೆ ಊರಿಂದ ಊರಿಗೆ ತಿರುಗಿ ಕಳ್ಳತನದಿಂದಲೇ ಜೀವನ ಸಾಗಿಸುತ್ತಿದ್ದ. ಹೀಗೆ ಒಂದು ದಿನ ಒಂದು ಊರಿಗೆ ಕಳ್ಳತನ ಮಾಡಲು ಬಂದ. ಆ ಊರಿನ ಜನ ಅಷ್ಟೇನೂ ಸ್ಥಿತಿವಂತರಾಗಿರಲಿಲ್ಲ. ಹಾಗಾಗಿ ಕಳ್ಳನು ಆ ಊರಲ್ಲಿ ಅನೇಕ ಮನೆ ಕೊಳ್ಳೆ ಹೊಡೆಯಲು ಪ್ರಯತ್ನ ಮಾಡಿ ವಿಫಲನಾದನು. ಕೊನೆಗೆ ಮನೆಯೊಂದರಲ್ಲಿ ಕುದುರೆಯನ್ನು ಕಂಡು ಅದನ್ನೇ ಕದ್ದನು. ಕಳ್ಳನು ಕುದುರೆಯನ್ನು ಓಡಿಸಿಕೊಂಡು ಹೋಗುತ್ತಿರಲು ನೋಡು ನೋಡುತ್ತಲೇ ಬೆಳಗಾಯಿತು. ಆ ವೇಳೆಗೆ ಅವನು ಒಂದು ದೊಡ್ಡ ಊರಿಗೆ ಬಂದು ಸೇರಿದ್ದ.



ಆ ಊರಲ್ಲಿ ಸಂತೆ ನಡೆಯುತ್ತಿತ್ತು. ಕಳ್ಳ ಚಾಣಾಕ್ಷತನದಿಂದ ಸಂತೆಯಲ್ಲಿ ಕುದುರೆಯನ್ನು ಮಾರಾಟಕ್ಕೆ ಇಟ್ಟನು. ಅನೇಕ ಜನರು ಪೊಗದಾಸ್ತದ ಕುದುರೆಯನ್ನು ಕಂಡು ಬೆರಗಾಗಿ ವಿಚಾರಿಸಿದರೇ ಹೊರತು, ಯಾರೂ ಅದನ್ನು ಕೊಳ್ಳಲು ಮುಂದಾಗಲಿಲ್ಲ. ಹೀಗೆ ಹೊತ್ತು ಕಳೆಯಿತು. ಸಂಜೆ ಆಯ್ತು. ಅನ್ನ ನೀರಿಲ್ಲದೆ ಕಳ್ಳನ ಹೊಟ್ಟೆ ಚುರುಗುಟ್ಟಿತು. ಕೊನೆಗೆ ಒಬ್ಬ ಖರೀದಿ ಮಾಡಲು ಬಂದ. ಅವನು ಕುದುರೆಯ ಬೆಲೆ ಎಷ್ಟು? ಎಂದು ಕೇಳಿದ. ಕಳ್ಳ 50,000 ಎಂದನು. ಖರೀದಿ ಮಾಡುವವನು 'ಕುದುರೆಗೆ ಇಷ್ಟೊಂದು ಬೆಲೆಯಾ? ಎಲ್ಲಾ ಕಡೆ ಹತ್ತು ಸಾವಿರ ಇದೆ' ಎಂದನು. ಆಗ ಕಳ್ಳ ಸ್ವಲ್ಪ ಯೋಚನೆ ಮಾಡಿ ಕುದುರೆ ಬೆಲೆ ಅಷ್ಟೆ ಇರಬಹುದೆಂದು ಭಾವಿಸಿ, 'ಆಯಿತು ಹತ್ತು ಸಾವಿರ ಕೊಡಿ' ಎಂದ. ಖರೀದಿ ಮಾಡುವವನು ಇನ್ನಷ್ಟು ಚೌಕಾಸಿ ಮಾಡುತ್ತಾ, 'ಇಲ್ಲ ಇಲ್ಲ, ಕುದುರೆಯ ವ್ಯಾಪಾರ ನೆಲಕಚ್ಚಿದೆ, ಎರಡು ಮೂರು ವರ್ಷದಿಂದ ಎಲ್ಲಿಯೂ ಕುದುರೆ ವ್ಯಾಪಾರವಿಲ್ಲ, ಕುದುರೆಯ ಬೆಲೆ 5,000ಕ್ಕೆ ಇಳಿದಿದೆ' ಎಂದ. ಕುದುರೆ ವ್ಯಾಪಾರದ ಬಗ್ಗೆ ಏನನ್ನೂ ತಿಳಿಯದ ಕಳ್ಳ, 'ಆಯ್ತು ಮಹಾಸ್ವಾಮಿ, 5,000ನೇ ಕೊಡಿ' ಎಂದನು.



ಖರೀದಿ ಮಾಡುವವನು 'ಆಯ್ತು 5,000 ರೂಪಾಯಿ ಕೊಡುತ್ತೇನೆ. ಆದರೆ ಒಂದು ಸುತ್ತು ಹಾಕಿ ಈ ಕುದುರೆ ಹೇಗೆ ಓಡುತ್ತೆ ಎಂದು ಪರೀಕ್ಷಿಸಿ ನಂತರ ಹಣ ಕೊಡುತ್ತೇನೆ' ಎಂದ.

ಬೆಳಿಗ್ಗೆಯಿಂದ ಸಂಜೆವರೆಗೆ ಹಸಿದ ಹೊಟ್ಟೆಯಲ್ಲಿದ್ದ ಕಳ್ಳ ಏನನ್ನು ಯೋಚಿಸದೆ 'ಆಯ್ತು ಹಾಗೆ ಮಾಡಿ' ಎಂದನು. ಖರೀದಿ ಮಾಡುವನು ಸರಸರನೇ ಕುದುರೆಯನ್ನು ಏರಿ ಪರೀಕ್ಷೆ ಮಾಡುತ್ತೇನೆ ಎಂದು ಹೇಳಿ ನೋಡು ನೋಡುತ್ತಲೇ ಓಡಿಸಿಕೊಂಡು ಹೋಗೆ ಬಿಟ್ಟ. ಹಿಂತಿರುಗಿ ಬರಲೇ ಇಲ್ಲ. ಖರೀದಿ ನೆಪದಲ್ಲಿ ಬಂದವನು ಇವನಿಗಿಂತ ದೊಡ್ಡ ಕಳ್ಳನಾಗಿದ್ದ. ಕದ್ದ ಕುದುರೆ ತನ್ನ ಕೈಗೆ ಸಿಗದಿದ್ದಕ್ಕೆ ನೊಂದ ಸಣ್ಣ ಕಳ್ಳ ಕೊನೆಗೆ ಕಳ್ಳತನ ಮಾಡುವುದು ತಪ್ಪು ಮತ್ತು ಅನ್ಯರ ವಸ್ತು ಪ್ರಾಣಕ್ಕೆ ಆಪತ್ತು ಎಂಬುದನ್ನು ಅರ್ಥ ಮಾಡಿಕೊಂಡನು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ. **ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 9448633038

**ಜಾಹೀರಾತಿಗಾಗಿ ಸಂಪರ್ಕಿಸಿ:**
**Contact for**
**EVENT COVERAGE**
**& Advertisements**
**in Leading**
**Hampi Times**
**Daily News Paper**
**M: 94486 33038**

# ಆಲೋಚನೆಯ ಹರಿವನ್ನು ಹೆಚ್ಚಿಸುವ ವಿಜ್ಞಾನದ ಕೌತುಕಗಳು

ಮಕ್ಕಳ ಪರೀಕ್ಷೆಗಳು ಮುಗಿದು ರಜಾ ಖುಷಿಯನ್ನು ಅನುಭವಿಸುತ್ತಿದ್ದಾರೆ. ರಜೆಯಲ್ಲಿ ಮಕ್ಕಳಿಗೆ ಓದಿನ ರುಚಿಹತ್ತಿಸುವುದುದೊಡ್ಡವರಜವಾಬ್ದಾರಿಯಾಗಿದೆ. ಓದು ಮಕ್ಕಳ ಬದುಕಿಗೆ ಮನೋರಂಜನೆ ಹಾಗೂ ಹೊಸ ವಿಷಯಗಳ ಜೊತೆಗೆ ಮತ್ತು ಸ್ಫೂರ್ತಿಯನ್ನು ನೀಡುವಂತಾದರೆ ಅದು ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ಈ ಹಿನ್ನಲೆಯಲ್ಲಿ ಕೆಲವು ಮಹತ್ತರ ಪುಸ್ತಕಗಳನ್ನು ಪರಿಚಯಿಸುವ ಆಶಯದಲ್ಲಿ ಮುಂದುವರೆದ ಭಾಗವಾಗಿ ಈ ಲೇಖನ.

'ವಿಜ್ಞಾನ' ಎಂಬ ಜ್ಞಾನವೃಕ್ಷದ ಹರುವು ದಿನಗಳೆದಂತೆ ಅದರ ವ್ಯಾಪ್ತಿ ವಿಸ್ತರಿಸುತ್ತಲೇ ಇದೆ. ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಗಮನಿಸಿದರೆ ಅಚ್ಚರಿ ಮೂಡಿಸುವಂತಿದೆ. ಅವುಗಳನ್ನು ಅರ್ಥ ಮಾಡಿಕೊಳ್ಳುವುದು ಒಂದೆಡೆಯಾದರೆ, ನಮ್ಮ ಮಕ್ಕಳಿಗೆ ಅವನ್ನು ತಲುಪಿಸುವುದೇಗೆ? ಎನ್ನುವುದನ್ನು ನೆನಪಿಸಿಕೊಂಡರೆ ಮನಸ್ಸಿನಲ್ಲಿ ದಿಗಿಲು ಮೂಡುತ್ತದೆ. ಹಾಗೆಂದು ಸುಮ್ಮನೇ ಕೈ ಕಟ್ಟಿ ಕುಳಿತುಕೊಳ್ಳುವಂತಿಲ್ಲ, ಅದರ ವೇಗಕ್ಕೆ ಸಮನಾಗಿ ಹೆಜ್ಜೆ ಹಾಕದಿದ್ದರೆ ಮುಂದಿನ ಪೀಳಿಗೆ ಶಪಿಸುವಂತಾಗುತ್ತದೆ.


ವಿಜ್ಞಾನವು ನಮ್ಮ ಬದುಕಿಗೆ ಜ್ಞಾನವನ್ನು ನೀಡುವುದರ ಜೊತೆಗೆ ನಲಿವನ್ನೂ ಕೊಡುತ್ತದೆ. ಪ್ರಸ್ತುತ ಆಧುನಿಕ ಸಮಾಜವು ತಾನು ವಿಜ್ಞಾನದಲ್ಲಿ ಸಾಕಷ್ಟು ಸಾಧನೆಯನ್ನು ಮಾಡಿದ್ದೇನೆ ಎಂದು ಜಂಭಕೊಚ್ಚಿಕೊಳ್ಳುತ್ತಿದೆ. ಆದರೆ ವಾಸ್ತವವೇ ಬೇರೆ ಇದೆ. ವಿಜ್ಞಾನದ ಬಗ್ಗೆ ನಮಗಿರುವ ಅಸಡ್ಡೆ ಮತ್ತು ಅಜ್ಞಾನದ ಪರಮಾವಧಿಯನ್ನು ಎಲ್ಲರೂ 'ಕೋವಿಡ್‌ಕಾಲ'ದಲ್ಲಿ ಗಮನಿಸಿದ್ದೇವೆ. ಇದನ್ನು ನಿವಾರಿಸಲು ಜನ ಸಾಮಾನ್ಯರಿಗೆ ವಿಜ್ಞಾನದಲ್ಲಿ ಆಸಕ್ತಿ ಬೆಳೆಸುವ ಕಾರ್ಯ ತುರ್ತು ಆಗಬೇಕಿದೆ. ಆ ನಿಟ್ಟಿನಲ್ಲಿ ವಿಜ್ಞಾನ ಸಾಹಿತ್ಯವೂ ಪ್ರಮುಖ ಪಾತ್ರವಹಿಸುವದನ್ನು ಅಲ್ಲಗಳೆಯುವಂತಿಲ್ಲ.



ಡಾ.ಪರಮೇಶ್ವರಯ್ಯ ಸೊಪ್ಪಿಮಠ
ಶಿಕ್ಷಕರು, ಹಗರಿಬೊಮ್ಮನಹಳ್ಳಿ

Scan For Digital Colourful
HAMPI TIMES E-paper

ಅತ್ಯಂತ ಪುರಾತನವಾದ ಮತ್ತು ಶಾಸ್ತ್ರೀಯ ಭಾಷೆ ಸ್ಥಾನ-ಮಾನ ಪಡೆದಿರುವ ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ ಮತ್ತು ಆಸಕ್ತಿ ಇನ್ನೂ ಆರಂಭದ ಘಟ್ಟದಲ್ಲಿಯೇ ಇದೆ ಎನಿಸುತ್ತದೆ. ಇದರ ನಡುವೆ ಅಲ್ಲೊಂದು ಇಲ್ಲೊಂದು ಮಿಂಚು ಹುಳುವಿನಂತೆ ಬೆಳಕನ್ನು ಚೆಲ್ಲಿ ನಮ್ಮಲ್ಲಿಯೂ ವಿಜ್ಞಾನದ ಬೆಳವಣಿಗೆಗೆ ಕಾರಣ ವಾಗುತ್ತಿರುವುದನ್ನು ತಳ್ಳಿ ಹಾಕುವಂತಿಲ್ಲ. ಆ ನಿಟ್ಟಿನಲ್ಲಿ ಆರ್.ಬಿ.ಗುರುಬಸವರಾಜ ಅವರು ಬರೆದಿರುವ ಸಾಹಿತ್ಯಲೋಕ ಪಬ್ಲಿಕೇಷನ್ಸ್ ರವರು ಪ್ರಕಟಿಸಿರುವ "ಕೌತುಕ-ವಿಜ್ಞಾನ"ಕೃತಿಯು ಗಮನ ಸೆಳೆಯುತ್ತದೆ.




ಪ್ರಸಿದ್ಧ ವಿಜ್ಞಾನ ಅಂಕಣಕಾರರಾದ ಗುರುರಾಜ ಎಸ್. ದಾವಣಗೇರೆಯವರು "ವಿಜ್ಞಾನ ವಿಷಯಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ಅದನ್ನು ಕನ್ನಡದಲ್ಲಿ ಜನಸಾಮಾನ್ಯರಿಗೆ ಅರ್ಥವಾಗುವಂತೆ ಬರೆಯುವುದು ಸುಲಭವಲ್ಲ ಎಂಬ ಭಾವನೆ ಸಾರ್ವತ್ರಿಕವಾಗಿರುವಾಗ, ತಮ್ಮ ಬರಹಗಳ ಮೂಲಕ ಆ ಭಾವನೆಯನ್ನು ಹುಸಿಯಾಗಿಸಿದ ಕೆಲವೇ ಲೇಖಕರುಗಳ ಪೈಕಿ ಆರ್.ಬಿ.ಗುರುಬದವರಾಜ ಅತ್ಯಂತ ವಿಶಿಷ್ಟರೆನಿಸುತ್ತಾರೆ. ಅದಕ್ಕೆ ಅವರ ಓದಿನ ಹಿನ್ನಲೆ ಮತ್ತು ಬರವಣಿಗೆ ಶೈಲಿಯೇ ಪ್ರಮುಖಕಾರಣವಾಗಿದೆ" ಎನ್ನುವ ಮಾತುಗಳು ಈ ಪುಸ್ತಕದ ಮಹತ್ವಕ್ಕೆ ಹಿಡಿದ ಕನ್ನಡಿಯಂತೆ ಕಾಣುತ್ತವೆ.

ಲೇಖಕರು ಕೃತಿಗೆ ಕೊಟ್ಟಿರುವ ಟ್ಯಾಗ್‌ಲೈನ್ (ಊಹಾತ್ಮಕ ಪ್ರಶ್ನೆಗಳಿಗೆ ವೈಜ್ಞಾನಿಕ ಉತ್ತರ)ಗಮನಿಸಿದರೆ ಕೃತಿ ಏನನ್ನು ಹೇಳಲು ಹೊರಟಿದೆ ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ವಿಜ್ಞಾನದ ಒಡಲು ದೊಡ್ಡದಾದಷ್ಟು ಅದನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದು ಅಷ್ಟೇ ದೊಡ್ಡದಾದ ಸವಾಲಿನ ಕೆಲಸ. ಅದರಲ್ಲೂ ಹೆಚ್. ಎನ್.ನಂತವರು ಪ್ರಶ್ನೆ ಮಾಡದೇ ಏನನ್ನೂ ಒಪ್ಪಿಕೊಳ್ಳಬಾರದು ಎನ್ನುವ ಹೇಳಿಕೆಗೆ ಪೂರಕವಾಗಿ ಈ ಕೃತಿ ಕಾಣಿಸುತ್ತದೆ.

ಈ ವಿಸ್ಮಯ ಜಗತ್ತಿನ ಕೌತುಕಗಳು, ನಿಗೂಢಗಳು ಇಂದಿಗೂ ಮನುಷ್ಯನಿಗೆ ಸವಾಲಾಗಿವೆ. ಹಾಗಾಗಿ ಅವನ ಮನದೊಳಗೆ ಸದಾ ಏಕೆ? ಹೇಗೆ? ಏನು? ಹೀಗಿದ್ದರೆ ಏನಾಗುತ್ತೆ? ಹೀಗಿಲ್ಲದಿದ್ದರೆ ಏನಾಗುತ್ತಿತ್ತು? ಎನ್ನುವಂತಹ ಪ್ರಶ್ನೆಗಳು ಕಾಡುತ್ತಲೇ ಇರುತ್ತವೆ. ಅವುಗಳಲ್ಲಿ ಕೆಲವು ಕಾಲ್ಪನಿಕ ಎನಿಸಿದರೂ ತರ್ಕಕ್ಕೆ ನಿಲುಕದ

ಪ್ರಶ್ನೆಗಳಾಗಿವೆ. ಅವುಗಳಿಗೆ ಉತ್ತರ ಹುಡುಕಿ ಹೊರಟಾಗ ಮಾತ್ರ ನಿಸರ್ಗದ ನಿಯಮಗಳ ಅರಿವಾಗುತ್ತದೆ. ಅದರಿಂದ ವೈಜ್ಞಾನಿಕ ಸತ್ಯಗಳು ಗೋಚರಿಸುತ್ತವೆ. ಇಂತಹ ತರ್ಕಕ್ಕೂ ನಿಲುಕದ ಪ್ರಶ್ನೆಗಳಿಗೆ ಉತ್ತರ ಹುಡುಕುವ ಪ್ರಯತ್ನವನ್ನು ಈ ಕೃತಿಯು ಮಾಡುತ್ತದೆ. ಆ ಮೂಲಕ ನಿತ್ಯ ಜೀವನದಲ್ಲಿ ನಮ್ಮ ಪರಿಸರಕ್ಕೆ ಸಂಬಂಧಿಸಿದಂತೆ ಅನೇಕ ಮಹತ್ತರ ಅಂಶಗಳು ಇಲ್ಲಿ ದಾಖಲಾಗಿವೆ.

ಕೃತಿಯಲ್ಲಿ ದಾಖಲಾದ ಅಂಶಗಳು ಅಚ್ಚರಿ ಮೂಡಿಸುತ್ತವೆ. ಸೂರ್ಯ ಸತ್ತರೆ ಏನಾಗುತ್ತದೆ?. ನಮಗೆಲ್ಲರಿಗೂ ಇನ್ನೂ ಹಲವು ವರ್ಷಗಳ ನಂತರ ಸೂರ್ಯ ಸಾಯುತ್ತಾನೆ ಎಂಬುದು ಗೊತ್ತಿದೆ. ಆದರೆ ಸತ್ತ ನಂತರ ಏನಾಗುತ್ತದೆ ಎಂಬುದು ಯೊಚಿಸುವುದು ತುಂಬಾ ಕಡಿಮೆ. ಆ ಕುರಿತು ಕುತೂಹಲವನ್ನು ತಣಿಸುವ ಉತ್ತರ ಇದರಲ್ಲಿದೆ. ಜೊತೆಗೆ ಭೂಮಿಯಲ್ಲಿ ಆಮ್ಲಜನಕ ಹೆಚ್ಚಾದರೆ, ಸಂಖ್ಯೆಗಳು ಇಲ್ಲದಿದ್ದರೆ, ಇನ್ನೊಬ್ಬ ಚಂದ್ರನಿದ್ದರೆ, ಭೂಮಿಯ ಕಕ್ಷೆ ಬದಲಾದರೆ, ಇನ್ನೊಬ್ಬ ಸೂರ್ಯನಿದ್ದರೆ, ಕೃತಕ ಚಂದ್ರನನ್ನು ತಯಾರಿಸಿದರೆ, ಮಾನವ ದ್ಯುತಿ ಸಂಶ್ಲೇಷಣೆ ಮಾಡುವಂತಿದ್ದರೆ, ಪ್ರಾಣಿಗಳು ನಮಗಿಂತ ಬುದ್ಧಿವಂತ ಆಗಿದ್ದರೆ, ಭೂಗ್ರಹದಿಂದ ಕೀಟಗಳು ಮರೆಯಾದರೆ, ಸತ್ತವರೆಲ್ಲ ಪುನಃ ಜೀವ ಪಡೆದರೆ?. . . . . . . . . . . ಹೀಗೆ ಮುವತ್ತಕ್ಕೂ ಹೆಚ್ಚು ವಿಭಿನ್ನ ಆಲೋಚನೆಗಳಿಗೆ ಉತ್ತರ ನೀಡುವುದರ ಜೊತೆಗೆ, ಅಂತಹ ಹೊಸ ಆಲೋಚನೆಗಳು ಹೆಚ್ಚಾಗಲು ಕೃತಿಯು ಪರೋಕ್ಷವಾಗಿ ಪ್ರೇರಣೆ ನೀಡುತ್ತದೆ.

ವಿಜ್ಞಾನದಲ್ಲಿ ಸಾಮಾನ್ಯವಲ್ಲದ ಕ್ಲಿಷ್ಟ ಹಾಗೂ ಸಂಕೀರ್ಣ ಎನಿಸುವ ವಿಜ್ಞಾನದ ತತ್ವ-ಕ್ರಿಯೆ-ಫಲ-ಬೆಳವಣಿಗೆಗಳ ಕುರಿತು ಅತ್ಯಂತ ಸರಳವಾಗಿ ಮತ್ತು ಅಷ್ಟೇ ಕುತೂಹಲಕರವಾಗಿ ಬರೆಯುವ ಮೂಲಕ ವೈಜ್ಞಾನಿಕ ತಿಳಿವಳಿಕೆ ಮತ್ತು ನಂಬಿಕೆಗಳ ಹರವನ್ನು ಕೃತಿಯು ವಿಸ್ತರಿಸುತ್ತದೆ. ನಮ್ಮ ಮನದೊಳಗೆ ಹುಟ್ಟುವ ಪ್ರಶ್ನೆಗಳಿಗೆ ಕೊನೆಯಿಲ್ಲ. ಅದಕ್ಕೆ ವೈಜ್ಞಾನಿಕವಾದ ಉತ್ತರವೂ ದೊರಕುವುದಿಲ್ಲ. ಈ ಸಮಸ್ಯೆಯನ್ನು ಮನಗಂಡಂತಿರುವ ಲೇಖಕರು ಅದನ್ನು ಕನ್ನಡದ ಮಟ್ಟಿಗೆ ನಿವಾರಣೆ ಮಾಡಲು ಪ್ರಯತ್ನಿಸಿರುವ ವಿನೂತನ ಬಗೆಯ ಬರವಣಿಗೆಯ ಶೈಲಿಯ ಲೇಖನಗಳ ಗುಚ್ಚವೇ ಕೌತುಕ-ವಿಜ್ಞಾನ. ಈ ಹಿನ್ನಲೆಯಲ್ಲಿ ಮಕ್ಕಳಿಗೆ, ಶಿಕ್ಷಕರಿಗೆ, ಸ್ಪರ್ಧಾತ್ಮಕ ಪರೀಕ್ಷೆ ತಯಾರಿಗೆ ಹಾಗೂ ಪಾಲಕರಿಗೆ ಈ ಪುಸ್ತಕ ಕೈಗನ್ನಡಿಯಂತಿದೆ.

ಈ ಪುಸ್ತಕ ರೂಪುಗೊಳ್ಳುವುದರ ಹಿಂದೆ ಲೇಖಕರ ವಿಭಿನ್ನ ಆಲೋಚನೆ ಮತ್ತು ಆಳವಾದ ಅಧ್ಯಯನ ಸ್ಪಷ್ಟವಾಗಿ ಕಾಣಿಸುತ್ತದೆ. ಕನ್ನಡದಲ್ಲಿ ವಿಜ್ಞಾನ ಕಲಿಸುವಾಗ ಎದುರಾಗುವ ಸವಾಲುಗಳಿಗೆ ಹೊತ್ತಿಗೆಯು ಜವಾಬಿನಂತೆ ಕಾಣುತ್ತದೆ. ಪ್ರಸ್ತುತ ದಿನದಲ್ಲಿ ವಿಜ್ಞಾನವು ನಾಗಾಲೋಟದಲ್ಲಿ ಓಡುತ್ತಿರುವಾಗ ಇಂಥದೊಂದು ಕೃತಿಯ ಅನಿವಾರ್ಯತೆಯನ್ನು ಈ ಗ್ರಂಥ ಒದಗಿಸಿದೆ. ವಿಜ್ಞಾನ ಸಂಸ್ಥೆಗಳು, ಪರಿಷತ್ತುಗಳು, ವಿಶ್ವವಿದ್ಯಾಲಯಗಳು ಮುಂದಿನ ದಿನಗಳಲ್ಲಿ ಯಾವ ರೀತಿ ವಿಜ್ಞಾನ ಪುಸ್ತಕಗಳನ್ನು ಹೊರತರಬೇಕು ಮತ್ತು ಅದರ ಬರವಣಿಗೆ ಶೈಲಿ ಹೇಗಿರಬೇಕು ಎನ್ನುವುದಕ್ಕೆ ಇದು ಮಾದರಿಯಾಗಿದೆ. ವಿಜ್ಞಾನದ ಆಸಕ್ತಿಯನ್ನು ಹೆಚ್ಚಿಸುವ ಕೆಲಸ ಇಂದಿನ ದಿನಗಳಲ್ಲಿ ಅತ್ಯಗತ್ಯವಾಗಿದೆ. ಈ ಹಾದಿಯ ಆರಂಭದಲ್ಲಿ ಇಡಲಾದ ದಿಟ್ಟ ಹೆಜ್ಜೆಯಾಗಿ ಕೌತುಕ-ವಿಜ್ಞಾನ ಗೋಚರಿಸುತ್ತದೆ.

# ಸಮಾಜ ಸೇವೆ ಅಲ್ಲ... ಸಾಮಾಜಿಕ ಜವಾಬ್ದಾರಿಯ ನಿರ್ವಹಣೆ

ನಿಮಗೆಲ್ಲಾ ನೆನಪಿರಬಹುದು... ಕರೋನಾದ ಸಂಕಷ್ಟ ಕಾಲದಲ್ಲಿ ದಿನಗೂಲಿ ನೌಕರರು, ಕೂಲಿ ಕಾರ್ಮಿಕರು, ವೃದ್ಧರು, ಬಡವರು, ನಿರ್ಗತಿಕರು, ಭಿಕ್ಷುಕರು ಒಂದು ಹೊತ್ತಿನ ಕೂಳಿಗೆ ಒದ್ದಾಡಿದರು. ಈಗಾಗಲೇ ಮನೆಯಲ್ಲಿ ತಂದಿಟ್ಟ ದಿನಸಿ ಪದಾರ್ಥ ಖಾಲಿಯಾದ ಮೇಲೆ ಮುಂದಿನ ಬದುಕು ಹೇಗಪ್ಪ ಎಂಬ ಸಂಕಷ್ಟ ಬಹುತೇಕ ಜನರನ್ನು ಆವರಿಸಿತು. ಈ ಸಮಯದಲ್ಲಿ ಕೆಲ ಸಾರ್ವಜನಿಕರ, ಸಂಘ ಸಂಸ್ಥೆಗಳ, ವಿವಿಧ ಪಕ್ಷಗಳ ಜನರು ಸ್ವಯಂ ಪ್ರೇರಿತರಾಗಿ ದಿನಸಿ ಸಾಮಾನುಗಳ ಕಿಟ್ಟಗಳನ್ನು ಮನೆ ಮನೆಗೆ ತಲುಪಿಸಿದರು. ಇನ್ನು ಕೆಲವೆಡೆ ತಾವು ತಾವೇ ಸೇರಿಕೊಂಡು ಅಡುಗೆ ಮಾಡಿ ಅವಶ್ಯಕತೆಯುಳ್ಳ ಜನರ ಮನೆಗಳಿಗೆ ಪಾರ್ಸಲ್ ಕಳುಹಿಸಿದರು. ಮತ್ತೆ ಕೆಲವು ಜನ ಯಾವುದೇ ಜಾತಿ, ಧರ್ಮ, ಪಂಥಗಳ ಭೇದವಿಲ್ಲದೆ ಜನರಿಗೆ ಒಪ್ಪತ್ತಿನ ಊಟಕ್ಕೆ ಕೊರತೆಯಾಗದಂತೆ ಸಹಾಯ ಮಾಡಿದರು.

ಕೆಲವರಂತೂ ಮನುಷ್ಯರೂಪಿ ದೇವತೆಗಳಾದರು. ಜನರ ಹಸಿವು ಸಂಕಟಗಳನ್ನು ನೋಡಲಾರದೆ ತಮ್ಮ ಆಸ್ತಿಯ ಒಂದಷ್ಟು ಭಾಗವನ್ನು ಮಾರಿ ಅದರಿಂದ ಅನ್ನದಾಸೋಹ ನಡೆಸಿದವರು ಮತ್ತೆ ಕೆಲವರು. ಆದರೆ ಇವರಾರು ತಮ್ಮ ಕೆಲಸಗಳನ್ನು ಸಮಾಜ ಸೇವೆ ಎಂದು ಹೇಳಿಕೊಳ್ಳಲಿಲ್ಲ.... ಬದಲಾಗಿ ಸಾಮಾಜಿಕ ಜವಾಬ್ದಾರಿ ಎಂಬಂತೆ ಕಾರ್ಯನಿರ್ವಹಿಸಿದರು. ಮಾಧ್ಯಮಗಳು, ವಿವಿಧ ಟಿವಿ ಚಾನೆಲ್ಗಳು ಇದನ್ನು ಹೈಲೈಟ್ ಮಾಡಲು ಕಾರಣ ಮತ್ತಷ್ಟು ಜನರು ಇದರಿಂದ ಪ್ರೇರಿತರಾಗಿ ತಾವು ಕೂಡ ತಮ್ಮ ಅಲ್ಪ ಕಾಣಿಕೆಯನ್ನು ಸಮಾಜದ ಒಳಿತಿಗೆ ಬಳಸಲಿ ಎಂದು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

ಆ ಸಮಯದಲ್ಲಿ ಬಹಳಷ್ಟು ಜನ ಎಲೆ ಮರೆಯ ಕಾಯಿಗಳಂತೆ ತಮ್ಮ ಸೇವೆಯನ್ನು ಮುಂದುವರಿಸಿದರು. ಕೆಲವರಂತೂ ಮಾಧ್ಯಮಗಳ ಮುಂದೆ ಬರಲು ಒಪ್ಪಲೇ ಇಲ್ಲ. ಕಾರಣ ಬಹಳ ಸ್ಪಷ್ಟವಾಗಿತ್ತು.... ದೇವರು ತಮಗೆ ನೀಡಿದ್ದರಲ್ಲಿ ತಾವು ಸಮಾಜಕ್ಕೆ ಅಳಿಲು ಕಾಣಿಕೆ ಸಲ್ಲಿಸಿರುವುದಾಗಿ ಬಹುತೇಕ ಜನರು ಹೇಳಿದರು. ಸತ್ತಾಗ ತಾವೇನು ಹೊತ್ತುಕೊಂಡು ಹೋಗುವುದಿಲ್ಲ. ಬದುಕಿ ಉಳಿದರೆ ಮುಂದೆ ಹೇಗೋ ದುಡಿದು ಜೀವನ ಸಾಗಿಸಬಹುದು. ಕರೋನಾದ ಈ ಸಂಕಷ್ಟ ಸಮಯದಲ್ಲಿ ಯಾರ ಬದುಕು ಹೇಗೆ ಎಂಬುದು ಅನಿಶ್ಚಿತ. ಆದ್ದರಿಂದ ತಮಗೆ ಇರುವುದರಲ್ಲಿ ಜನರಿಗೆ ಮೂಲಭೂತ ಅವಶ್ಯಕತೆಗಳಲ್ಲಿ ಒಂದಾದ ಆಹಾರವನ್ನು ಪಡೆಯಲು ವಿನಿಯೋಗಿಸುವುದು ತಮ್ಮ ಸಾಮಾಜಿಕ ಜವಾಬ್ದಾರಿ ಎಂಬುದು ಅವರ ಅಂಬೋಣವಾಗಿತ್ತು.

ಹಾಗೆಂದು ಅವರಲ್ಲಿ ಬಹಳಷ್ಟು ಜನ ಶ್ರೀಮಂತರಾಗಿರಲಿಲ್ಲ. ದುಡಿದು ತಿನ್ನುವವರಲ್ಲಿಯೇ ಇದ್ದುದರಲ್ಲಿ ತುಸು ಅನುಕೂಲಸ್ಥರಾಗಿದ್ದರು. ಆದರೂ ನಾಳೆ ಹೇಗಪ್ಪಾ ಎಂಬ ಚಿಂತೆ ಮಾಡದೆ ಜನರ ನೋವಿಗೆ ಮುಲಾಮು ಸವರಿದರು.

ಇದು ಕೆಲ ಜನರದ್ದಾದರೆ ಸಾಮಾಜಿಕವಾಗಿ ಅತ್ಯಂತ ಕೆಳ ಸ್ಥರದಲ್ಲಿರುವ ಮತ್ತೆ ಕೆಲ ಜನರು ಆಸ್ಪತ್ರೆಯಲ್ಲಿ ಸತ್ತ ಕರೋನ ರೋಗಿಗಳನ್ನು ಹೂಳಲು ಸ್ಮಶಾನದಲ್ಲಿ ನೆಲವನ್ನು ಅಗೆಯುವ, ಸುಡಲು ಬೇಕಾಗುವ ಕಟ್ಟಿಗೆಗಳನ್ನು ಸಂಗ್ರಹಿಸಿ ಒಡೆದು ಸೇರಿಸುವ, ಪಿಪಿಇ ಕಿಟ್ ಧರಿಸಿ ಅಂತಹ ರೋಗಿಗಳ ಶವಗಳನ್ನು ಸೂಕ್ತವಾಗಿ ಅವರವರ ಧಾರ್ಮಿಕ ಸಂಪ್ರದಾಯದಂತೆ ಅಂತ್ಯಸಂಸ್ಕಾರ ನಡೆಸುವ ಕಾಯಕದಲ್ಲಿ ತೊಡಗಿಕೊಂಡರು. ಸೋಂಕಿನ ಭೀತಿ ಇದ್ದರೂ ಕೂಡ ತಮ್ಮ ಬದುಕನ್ನು ಪಣವಾಗಿಟ್ಟು ಈ ಕೆಲಸಗಳನ್ನು ನಿರ್ವಹಿಸಿದರು. ಮತ್ತೆ ಕೆಲ ಚಾಲಕ ವೃತ್ತಿಯಲ್ಲಿರುವವರು ಹಗಲಿರುಳೆನ್ನದೆ ಕೊರೊನಾ ಪೀಡಿತರನ್ನು ಆಸ್ಪತ್ರೆಗೆ ದಾಖಲಿಸಲು, ಅಕಸ್ಮಾತ್ ಮರಣ ಹೊಂದಿದರೆ ಶವ ಸಂಸ್ಕಾರಕ್ಕೆ ಅನುಕೂಲವಾಗುವಂತೆ ಕುಟುಂಬದವರಿಗೆ ಸಹಾಯ ಹಸ್ತ ನೀಡಿದರು. ಬೆರಳೆಣಿಕೆಯ ಕೆಲವೇ ಜನರನ್ನು ಹೊರತುಪಡಿಸಿದರೆ ಇನ್ನುಳಿದವರಿಗೆ ಆ ಸಮಯದಲ್ಲಿ ದುಡ್ಡು ಮುಖ್ಯವಾಗಿರದೇ, ಮಾನವೀಯತೆ ಮುಖ್ಯವಾಗಿತ್ತು.

ಈ ವಿಷಯವನ್ನು ಈಗ ನೆನಪು ಮಾಡಿಕೊಳ್ಳಲು ಕಾರಣ... ತಾವು ಕೊಟ್ಟ ಟ್ಯೂಬ್ ಲೈಟ್ನ ಬೆಳಕು ಬೀಳದಂತೆ ಅದರ ತುಂಬಾ ತಮ್ಮ ಹೆಸರು ಬರೆದುಕೊಳ್ಳುವ ಭಕ್ತರು, ವಿವಿಧ ರೀತಿಯಲ್ಲಿ ದಾನ ಮಾಡಿದ ಜನರ ಹೆಸರುಗಳು ಆಯಾ ವಸ್ತುಗಳ ಮೇಲೆ ಇರುತ್ತವೆ. ಮತ್ತೆ ಕೆಲವೊಮ್ಮೆ ತಾವು ಕೊಟ್ಟಿರುವ ದಾನದ ಕುರಿತಾಗಿ ಯಾವುದೇ ರೀತಿ ಜನರಿಗೆ ಮಾಹಿತಿ ನೀಡದೆ, ಪತ್ರಿಕೆಗಳಲ್ಲಿ ಪ್ರಕಟಣೆ ಕೊಡದೆ ಇರುವುದರ ಕುರಿತು ತಾವು ದಾನ ನೀಡಿದ ಸಂಸ್ಥೆಗಳೊಂದಿಗೆ ಜಗಳವಾಡಿಕೊಂಡವರು ಇದ್ದಾರೆ, ಮುನಿಸಿಕೊಂಡವರು ಇರುತ್ತಾರೆ. ಸಾಮಾಜಿಕವಾಗಿ ಬೆಳಕಿಗೆ ಬರಬೇಕು ಎಂಬ ಅವರ ಅನಿಸಿಕೆ ತಪ್ಪಲ್ಲವಾದರೂ.... ಸರಿಯೂ ಅಲ್ಲ.

ಇಡೀ ಜಗತ್ತನ್ನು ಪಾಲಿಸುವ, ಬೆಳಕನ್ನು ಕೊಡುವ ಸಮಸ್ತ ಜೀವ ರಾಶಿಗಳನ್ನು ಕಾಯುವ ಸೂರ್ಯ, ನಾವು ಉಸಿರಾಡುವ ಗಾಳಿ ಕುಡಿಯುವ ನೀರು, ಅನ್ನ ನೀಡುವ ರೈತ ಇವರ್ಯಾರು ತಂತಮ್ಮ ತಮಟೆಯನ್ನು ಬಾರಿಸಿ ತಾವು ಜಗದ್ರಕ್ಷಕರು ಎಂದು ಹೇಳಿಕೊಳ್ಳುವುದಿಲ್ಲ ಅಷ್ಟೇ. ಹಲವಾರು ರೀತಿಯ ಹೊಗಳಿಕೆ ತೆಗಳಿಕೆಗಳು ನಮ್ಮಿಂದ ಅವರಿಗೆ ಉಂಟಾದರೂ ಚಕಾರ ಎತ್ತದೆ ತಮ್ಮ ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ.

ಹೀಗೆ ಉಚಿತವಾಗಿ ಗಾಳಿ, ಬೆಳಕು, ನೀರು, ಆಹಾರಗಳನ್ನು ಪಡೆಯುವ ನಾವು ಅವರಿಗೆ ಕೃತಜ್ಞರಾಗಿರಬೇಕಲ್ಲವೇ? ಹಾಗಾದರೆ ನಾವೇನು ಮಾಡಬೇಕು? ತಾಯಿ ತನ್ನ ಮಕ್ಕಳಿಗೆ ಉಣಿಸುವಾಗ ತೋರುವ ವಾತ್ಸಲ್ಯದಂತೆ, ತಂದೆ ತನ್ನ ಮಕ್ಕಳನ್ನು ಬೆಳೆಸುವಾಗ ತೋ ರುವ ಶಿಸ್ತಿನಂತೆ, ಗುರು ತನ್ನ ಶಿಷ್ಯರಿಗೆ ಕಲಿಸುವ ಜೀವನದ ಪಾಠದಂತೆ ನಾವು ಕೂಡ ನಮ್ಮ ಸಾಮಾಜಿಕ ಸೇವೆಗಳನ್ನು ಸೇವೆ ಎಂದು ಪರಿಗಣಿಸದೆ ಈ ಬದುಕನ್ನು ನಡೆಸಲು ಅನುವು ಮಾಡಿಕೊಟ್ಟಿರುವ ಸಮಾಜಕ್ಕೆ ಸ್ಪಂದಿಸುವ, ನೆರವಾಗುವ ಮತ್ತು ಆ ಮೂಲಕ ನಮ್ಮ ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸುವ ಕಾರ್ಯ ನಮ್ಮಿಂದ ಆಗಬೇಕಿದೆ.

ಇಲ್ಲಿ ಕೊಟ್ಟವರಿಗೆ ಕೊಟ್ಟೆನೆಂಬ ಹಮ್ಮು ಇರದ, ಪಡೆದುಕೊಂಡವರಿಗೆ ಸಂಕೋಚದ ದೈನ್ಯತೆಯ, ಅಳುಕಿರದ ಸ್ವಸ್ಥ ಸಮಾಜದ ನಿರ್ಮಾಣ ಆಗಬೇಕಿದೆ.

ಸಮಾಜ ಸೇವಕರೆಂಬ ಹೆಸರಿನಲ್ಲಿ ಪ್ರಚಾರ ಗಿಟ್ಟಿಸುವ, ಪ್ರಶಸ್ತಿ ಪುರಸ್ಕಾರಗಳಿಗೆ ದುಂಬಾಲು ಬೀಳುವ ಜನರು ಮಹಾಭಾರತದ ಕರ್ಣನನ್ನು, ಬಸವಣ್ಣನವರ ಕಾಲದ ದಾಸೋಹ ಪದ್ಧತಿಯನ್ನು ಒಮ್ಮೆ ನೆನೆಸಿಕೊಳ್ಳಬೇಕು.

ಇಡೀ ಜಗತ್ತಿನ ಯಾವುದೇ ಭಾಗದಲ್ಲಿ ನೋಡಿದರೂ ಆ ಸಾಮಾಜಿಕ ವ್ಯವಸ್ಥೆ ಹೇಳುವುದು ಇಷ್ಟೇ... ತನ್ನ ದುಡಿಮೆಯ ಒಂದು ಪಾಲನ್ನು ತನ್ನ ಕುಟುಂಬಕ್ಕಾಗಿಯೂ ಮತ್ತೊಂದು ಪಾಲನ್ನು ತನ್ನ ಭವಿಷ್ಯಕ್ಕಾಗಿಯೂ ಅಂದರೆ ತನ್ನ ಮಕ್ಕಳನ್ನು ಬೆಳೆಸಲು, ಒಂದು ಪಾಲನ್ನು ಸಮಾಜದ ಒಳಿತಿಗಾಗಿಯೂ ವಿನಿಯೋಗಿಸುವಂತೆ ಎಲ್ಲಾ ನಾಗರಿಕತೆಗಳು ಹೇಳುತ್ತಾ ಬಂದಿದೆ... ಬಸವಣ್ಣನವರ ಕಾಲದಲ್ಲಂತೂ ನನ್ನ ಮನೆಗೆ ಕಳ್ಳತನ ಮಾಡಲು ಕಳ್ಳ ಬಂದರೆ ಆತನಿಗೆ ಬೇಕಾದುದನ್ನು ಕೊಂಡೊಯ್ಯಲು ಕೇಳಿಕೊಂಡ ಉದಾಹರಣೆಗಳಿವೆ. ಕೇಳುವವರಿಲ್ಲದೆ ಬಡವಾದೆನಯ್ಯ ಎಂಬಂತಹ ಮುತ್ತಿನಂತ ಮಾತುಗಳಿವೆ.

ಆದ್ದರಿಂದ ಸ್ನೇಹಿತರೆ, ನಮಗೆ ಇದ್ದಾಗ ನಮಗೆ ಬೇಕಷ್ಟನ್ನು ಉಳಿಸಿಕೊಂಡು, ನಿಜವಾಗಿಯೂ ಅವಶ್ಯಕತೆ ಇರುವ ಜನರಿಗೆ ಸಹಾಯ ಮಾಡುವ ಸಾಮಾಜಿಕ ಸೇವೆಯನ್ನು!! ಅಲ್ಲಲ್ಲ.... ಸಾಮಾಜಿಕ ಜವಾಬ್ದಾರಿಯನ್ನು ನಾವೆಲ್ಲರೂ ಸಮರ್ಥವಾಗಿ ನಿರ್ವಹಿಸೋಣ. ಆ ಮೂಲಕ ಸ್ವಸ್ಥ ಸಮಾಜದ ನಾಗರಿಕರಾಗಿ ಬಾಳೋಣ...

## ಕವಿ ಮನಸು

### ನಿರೀಕ್ಷೆ –ಪರೀಕ್ಷೆ




ರಾಜಕಾರಣಿಗಳು ನಮ್ಮ
ಜೀವನವನ್ನು ಬದಲಿಸುತ್ತಾರೆ
ಎಂಬುದು
ಮುಗ್ದ ಮತದಾರರ ನಿರೀಕ್ಷೆ !!

ಆದರೂ ಆಸೆಗಣ್ಣಿನಿಂದ
ಬರೆಯುತ್ತಾರೆ
ಐದು ವರ್ಷಕ್ಕೊಮ್ಮೆ
ನಡೆವ ಚುನಾವಣೆಯಲ್ಲಿ
ಮತದಾನದ
ಪರೀಕ್ಷೆ !!

ಇಂದಿಗೂ ಬದಲಾಗಿಲ್ಲ
ಮತದಾರರ ಭಾರಿ
ನಿರೀಕ್ಷೆ ;
ಎಂದಿಗೂ ಬದಲಾಗಲ್ಲ
ರಾಜಕಾರಣೀಗಳ ಕುರ್ಚಿಯ
ಅಪೇಕ್ಷೆ !!

ಬದಲಾಗುವುದೊಂದೆ
ಭರವಸೆಗಳ ಭರಪೂರ
ಘೋಷಣೆಗಳಿಗೆ
ಬಲಿಯಾಗೋ
ಮತದಾರರ ಆಕಾಂಕ್ಷೆ !!

– ಕಾಡಜ್ಜಿ ಮಂಜುನಾಥ

### ಬದುಕೊಂದು ಬೆಳಗುವ ಹಣತೆ



ಬೆಳೆಯಬೇಕು ತೆಂಗಿನಂತೆ
ಬಾಗಬೇಕು ಬಳ್ಳಿಯಂತೆ
ಎಲ್ಲರೂ ನಮ್ಮ ನೋಡುವಂತೆ
ಆಗ ಬದುಕೇ ಬಹಳ ಸೊಗಸಂತೆ//

ಅಹಂ ಬಿಟ್ಟು ಬಿಡಬೇಕು
ಸ್ವಾಭಿಮಾನವು ನಮ್ಮಲ್ಲಿರಬೇಕು
ತಾಳ್ಮೆಯು ನಮ್ಮ ಜೊತೆ ಇರಬೇಕು
ಇಷ್ಟಿದ್ದರೆ ನಮ್ಮ ಬಾಳೇ ಬೆಳಕು//

ಮನ ತುಂಬಾ ಗುಣವೇ ಅವಿತಿರಬೇಕು
ಹೃದಯದಲ್ಲಿ ಆತ್ಮೀಯ ಭಾವ ಇರಬೇಕು
ಎಲ್ಲರೊಂದಿಗೂ ಖುಷಿಯಾಗಿರಬೇಕು
ಬದುಕೊಂದು ಹುಣ್ಣಿಮೆಯ ಬೆಳಕು//

ಮಾತಿನ ಧಾಟಿ ನೇರವಾಗಿ ಮನ
ಮೆಚ್ಚಬೇಕು
ಆಡುವ ಮಾತು ಕಟು ಸತ್ಯವಾಗಿರಬೇಕು
ಮೋಸ ವಂಚನೆಯಿಂದ ದೂರವಿರಬೇಕು
ಬದುಕೊಂದು ಸಿಹಿ ಕಹಿಯ ತುಣುಕು//

ಸತ್ಯ ಧರ್ಮವು ಕೈ ಬಿಡಲ್ಲವೆಂದೂ
ನಿಧಾನವಾದರೂ ಯಶಸ್ಸು ಸಿಕ್ಕೇ ಸಿಗುವುದು
ಯಾರಿಗೂ ನೋವು ಕೊಡದೆ ಬದುಕ
ಬೇಕೆಂದೂ
ಅದರಿಂದ ಜೀವನವಾಗುವುದು ಬೆಳಗುವ
ಹಣತೆ ಎಂದೆಂದೂ//

– ಸವಿತಾ ಸತೀಶ್ ಶೆಟ್ಟಿ
ದಕ್ಷಿಣ ಕನ್ನಡ ಬೆಳ್ತಂಗಡಿ

### ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

ಹಂಪಿ ಅರಮನೆಯ ಸಂಶೋಧನೆಗೆ ಸುಳಿವು ಕೊಟ್ಟ ಶಾಸನ | ಹಂಪಿ ಪಟ್ಟಣದ ಎಲ್ಲಮ್ಮ– ಶಾಸನಾಧಾರಿತ ಚರಿತ್ರೆ

# ಶಕ್ತಿ ದೇವತೆ ಹಂಪಿ ಪಟ್ಟಣದ ಎಲ್ಲಮ್ಮ

## ಪಟ್ಟಣದ ಎಲ್ಲಮ್ಮಳ ಬಗ್ಗೆ ದೊರೆತ ಮೊದಲ, ಏಕೈಕ ಶಾಸನ | ಎರಡು ಅರಮನೆಗಳಿರಬಹುದೆಂಬ ಕುತೂಹಲ!

## ಅಂದು ಆನೆಗೊಂದಿ ಅರಸರ ವಂಶಸ್ಥರ ಸಮ್ಮುಖದಲ್ಲಿ ಪೂಜೆ | ಕಪ್ಪು ಶಿಲೆ ದೇವಿಯು ಸುಮಾರು ಆರು ಅಡಿ ಎತ್ತರ

ವಿಜಯನಗರ ಅರಸರ ಕಾಲದಲ್ಲಿ ಬಹಳ ಪ್ರಭಾವಶಾಲಿ ಶಕ್ತಿದೇವತೆಯಾದ ಎಲ್ಲಮ್ಮ ಇವತ್ತಿಗೂ ಜನಸಮುದಾಯದಿಂದ ಪೂಜೆಗೊಳ್ಳುತ್ತಿರುವಳು. ಇಂದಿಗೂ ಪೂಜೆಗೊಳ್ಳುತ್ತಿರುವ ಹಂಪಿಯಲ್ಲಿರುವ ಕೆಲವೇ ದೇವಾಲಯಗಳ ಪೈಕಿ ಇದೂ ಒಂದು.

ಕೆಲವು ವರ್ಷಗಳ ಮುಂಚೆ ಬೇರೆ ಬೇರೆ ಕಡೆಗಳಿಂದ ಹಂಪಿಗೆ ಬಂದು ಸೇರುವ ಪುರಾತನ ರಸ್ತೆಗಳ ಪರಿಶೀಲನೆಯ ಸಂದರ್ಭದಲ್ಲಿ ಕಡ್ಡಿರಾಂಪುರದ ವಾಯುವ್ಯಕ್ಕೆ ಸುಮಾರು ಎರಡು ಕಿ.ಮೀ. ದೂರದಲ್ಲಿ ಕಬ್ಬಿನಗದ್ದೆಯ ನಡುಭಾಗದಲ್ಲಿ ಒಂದು ಶಾಸನ ಪತ್ತೆಯಾಗಿತ್ತು. ವಿಜಯನಗರದ ಪ್ರಮುಖ ಅರಸ ಪ್ರೌಢದೇವರಾಯನ ಅವಧಿಯ ಈ ಶಾಸನವು ಹಂಪಿ ಪಟ್ಟಣದ ಎಲ್ಲಮ್ಮಳ ಬಗ್ಗೆ ದೊರೆಯುವ ಏಕೈಕ ಲಿಖಿತ ದಾಖಲೆಯಾಗಿದೆ.

ಈ ಶಾಸನವಿರುವ ಗದ್ದೆಯ ಬಹುಭಾಗ ಕಪ್ಪು ಕಲ್ಲುಗುಂಡುಗಳಿಂದ ಕೂಡಿದ್ದು, ಅವುಗಳಲ್ಲಿ ಒಂದು ಸಮತಟ್ಟಾದ ಬಂಡೆಯ ಮೇಲೆ ಈ ಪಟ್ಟಣದ ಎಲ್ಲಮ್ಮಳನ್ನು ಹೆಸರಿಸುವ 18 ಸಾಲುಗಳಲ್ಲಿ ಶಾಸನವನ್ನು ಕೆತ್ತಲಾಗಿದೆ. ಅಕ್ಷರಗಳು ಸ್ಫುಟವಾಗಿದ್ದು ಶಾಸನವನ್ನು ಸುಲಭವಾಗಿ ಓದಬಹುದಾಗಿದೆ. ಆದರೆ ಶಾಸನವಿರುವ ಬಂಡೆಯ ದಕ್ಷಿಣ ಭಾಗಕ್ಕೆ ಬೆಂಕಿ ತಗುಲಿ ಬಂಡೆಯು ಸಿಡಿದು ಹಾಳಾಗಿ ಹಲವು ಅಕ್ಷರಗಳು ನಷ್ಟವಾಗಿವೆ. ಕಬ್ಬಿನ ಗದ್ದೆಯ ಕಸಕ್ಕೆ ಆಗಾಗ ಬೆಂಕಿ ಹಚ್ಚುವುದರಿಂದ ಈ ರೀತಿ ಶಾಸನಕಲ್ಲು ಸಿಡಿದು ಅಕ್ಷರಗಳು ಹಾಳಾಗಿವೆ. ಶಾಸನದ ಬಂಡೆಯನ್ನು ನಯಗೊಳಿಸದೆ ಇದ್ದ ಸ್ಥಿತಿಯಲ್ಲೇ ಬರೆದಿರುವುದರಿಂದ ಬಂಡೆಯ ಹೊರಮೈ ಲಕ್ಷಣಕ್ಕೆ ಅನುಗುಣವಾಗಿ ಸಾಲುಗಳೂ ಮುಂದುವರಿದು ಅಂಕುಡೊಂಕಾಗಿವೆ. ವಿಜಯನಗರ ಅರಸರ ಬಹುತೇಕ ಶಾಸನಗಳಲ್ಲಿ ಕಂಡುಬರುವಂತೆ ಈ ಶಾಸನದಲ್ಲೂ ಪ್ರತಿ ಸಾಲಿನ ಆರಂಭದಲ್ಲಿ ಒಂದೊಂದು ಸೊನ್ನೆಯನ್ನು ಕೆತ್ತಲಾಗಿದೆ. ಶಾಸನವು ಒಟ್ಟು ಹದಿನೆಂಟು ಸಾಲುಗಳನ್ನು ಒಳಗೊಂಡಿದ್ದು ಆರಂಭದ ಸಾಲುಗಳು ಉದ್ದವಾಗಿದ್ದು ನಂತರ ಸಾಲುಗಳು ಕ್ರಮವಾಗಿ ಚಿಕ್ಕದಾಗಿವೆ.

ಶಾಸನದಲ್ಲಿ ಕಾಲದ ಉಲ್ಲೇಖ ಹೀಗಿದೆ : "ಶಾಲಿವಾಹನ ಶಕ ವರುಷ 13(47) ವಿಶ್ವಾವಸು ಸಂವತ್ಸರದ ಪುಶ್ಯ ಶು 15 ಗು(ರು)ವಾರ ಮಕರ ಸಂಕ್ರಾಂತಿ ಪುಣ್ಯಕಾಲದಲೂ" ಎಂದಿದೆ. ಇಲ್ಲಿ ಸಂವತ್ಸರ ಮತ್ತು ತಿಥಿಯನ್ನು ಸರಿಯಾಗಿ ನೀಡಿದ್ದರೂ ವರ್ಷದ ಉಲ್ಲೇಖದ ಭಾಗ ತ್ರುಟಿತವಾಗಿದೆ. ಲಿಪಿಯ ಶೈಲಿ ಮತ್ತು ಅರಸನ ಉಲ್ಲೇಖದಿಂದ ಈ ಶಾಸನದ ಕಾಲ ಕ್ರಿ.ಶ.1425, ಡಿಸೆಂಬರ್ 27, ಗುರುವಾರಕ್ಕೆ ಸರಿಹೊಂದುತ್ತದೆ. ಶಾಸನದ ಮತ್ತೊಂದು ಪ್ರಮುಖ ಭಾಗವಾದ ಅರಸನ ಹೆಸರನ್ನು ವೀರಪ್ರತಾಪರಾಯಮಹಾರಾಯ ಎಂದು ಉಲ್ಲೇಖವಾಗಿದೆ. ಇವನು ಇಮ್ಮಡಿದೇವರಾಯ ಅಥವಾ ಪ್ರೌಢದೇವರಾಯನೆಂದು ಹೇಳಬಹುದು.



ಪ್ರೊ.ಡಿ.ವಿ.ಪರಮಶಿವಮೂರ್ತಿ
ಕುಲಪತಿಗಳು, ಕನ್ನಡ ವಿಶ್ವವಿದ್ಯಾಲಯ

Scan For Digital Colourful
HAMPI TIMES E-paper

ಕ್ರಿ.ಶ.1425, ಡಿಸೆಂಬರ್ 27, ಗುರುವಾರ ಮಕರ ಸಂಕ್ರಾಂತಿಯ ಪುಣ್ಯಕಾಲದಲ್ಲಿ ಪ್ರೌಢದೇವ ರಾಯನು ಹಂಪಿಯ ಪಟ್ಟಣದ ಎಲ್ಲಮ್ಮನಿಗೆ ಭೂಮಿಯನ್ನು ದಾನ ನೀಡಿದ ವಿವರ ಈ ಶಾಸನದ ಮುಖ್ಯ ಪಾಠವಾಗಿದೆ. ಹಿರಿಯ ಅರಮನೆಯ ಒಳಭಾಗದ ಸೋಗುಲ ವಾಡಿಯ ಶ್ರೀ ಎಲ್ಲಮ್ಮ ದೇವತೆಗೆ ರಾಮಾಪುರದ ಸೀಮೆಯಲ್ಲಿ (ಈಗಿನ ಕಡೆರಾಮಪುರ) ಹತ್ತು ಕೊಳಗ ಗದ್ದೆಯನ್ನು ಮಾನ್ಯವಾಗಿ ನೀಡಿದ್ದು, ಇದಕ್ಕೆ ಯಾರಾದರೂ ತಪ್ಪಿದರೆ ಯತಿ, ಗೋವುಗಳು ಮತ್ತು ಬ್ರಂಹ್ಮ ಹತ್ಯದ ಮಹಾಪಾಪಕ್ಕೆ ಸಲ್ಲುವರೆಂದು ಶಾಸನದಲ್ಲಿ ಹೇಳಲಾಗಿದೆ. ಹತ್ತು ಕೊಳಗ ಬತ್ತವನ್ನು ಬಿತ್ತುವಷ್ಟು ಗದ್ದೆಯನ್ನು ದಾನವಾಗಿ ನೀಡಲಾಗಿದೆ.

ಶಾಸನದಲ್ಲಿ ಗಮನ ಸೆಳೆಯುವ ಉಲ್ಲೇಖವೆಂದರೆ 'ಹಿರಿಯರ ಮನೆಯೊಳಗಣ ಯೆಲ್ಲಮ್ಮ' ಎಂಬ ಭಾಗ. ಈ ಪದವನ್ನು 'ಹಿರಿಯರ ಮನೆಯ ಒಳಗಣ ಯೆಲ್ಲಮ್ಮ' ಎಂದೂ, 'ಹಿರಿಯ ಅರಮನೆಯ ಒಳಗಣ ಯೆಲ್ಲಮ್ಮ' ಎಂದೂ ಎರಡು ರೀತಿಯಾಗಿ ವಿಭಾಗಿಸಬಹುದು. ಹಿರಿಯರ ಮನೆ ಒಳಗಣ ಎಂದರೆ ಅರ್ಥ ಸ್ಪಷ್ಟವಾಗುವುದಿಲ್ಲ. ಅಲ್ಲದೆ ಮನೆಯ ಒಳಗೆ ಯೆಲ್ಲಮ್ಮ ಇದ್ದಳೆ? ಎಂದು ಅನುಮಾನವಾಗುತ್ತದೆ. ಅಲ್ಲದೆ ಯಾವ ಹಿರಿಯರ ಮನೆ? ಎಂದು ಅನುಮಾನವೂ ಉಂಟಾಗುತ್ತದೆ. ಇನ್ನೂ ಹಿರಿಯ ಅರಮನೆಯ ಒಳಗಣ ಯೆಲ್ಲಮ್ಮ ಎಂಬುದಕ್ಕೆ ಹಿರಿಯ ಅರಮನೆಯ ಒಳಗಿದ್ದ (ಆಸುಪಾಸಿನಲ್ಲಿದ್ದ) ಯೆಲ್ಲಮ್ಮ ಎಂದು ಅರ್ಥೈಸಬೇಕಾಗುತ್ತದೆ. ಇದೇ ಸರಿಯೆಂದು ನಮ್ಮ ಭಾವನೆ. ಹೀಗಾಗಿ ಯೆಲ್ಲಮ್ಮನ ಗುಡಿ ಇರುವ ಸ್ಥಳವು ಹಿರಿಯ ಅರಮನೆಯ ಒಳಗಣ ಪ್ರದೇಶವಾಗಿತ್ತೆಂದು ಸ್ಪಷ್ಟವಾಗಿ ತಿಳಿದುಬರುತ್ತದೆ. ಹಿರಿಯ ಅರಮನೆ ಎಂದರೆ ದೊಡ್ಡ ಅಥವಾ ಮುಖ್ಯ ಅರಮನೆ ಎಂಬ ಅರ್ಥ. ಇದರಿಂದಾಗಿ ಅರಮನೆಯನ್ನು ಪತ್ತೆ ಹಚ್ಚಲು ಈ ಶಾಸನ ಸ್ವಲ್ಪಮಟ್ಟಿಗಿನ ನೆರವನ್ನೀಯುತ್ತದೆ. ಯೆಲ್ಲಮ್ಮನ ಗುಡಿಯ ಆಸುಪಾಸಿನಲ್ಲೇ ಮುಖ್ಯ ಅರಮನೆ ಇತ್ತೆಂಬ ಅಂಶವನ್ನು ಇದು ಸೂಚಿಸುತ್ತದೆ. ಶಾಸನವು "ಹಿರಿಯ ಅರಮನೆ ಒಳಗಣ..... ಸೋಗುಲವಾಡಿಯ ಶ್ರೀ ಯೆಲ್ಲಮ್ಮ......" ಎಂದು ಹೇಳಿರುವುದರಿಂದ.... ಸೋಗುಲವಾಡಿ ಎಂಬುದು ಅರಮನೆಯ ಆವರಣದಲ್ಲಿದ್ದ ಸ್ಥಳವೆ ಅಥವಾ ಬೀದಿಯೇ ಎಂಬುದಕ್ಕೆ ಹೆಚ್ಚಿನ ಸಂಶೋಧನೆ ಆಗಬೇಕಿದೆ.

ಈ ಶಾಸನದಿಂದ ಪಟ್ಟಣದ ಎಲ್ಲಮ್ಮಳು ವಿಜಯನಗರದ ಇತಿಹಾಸದ ಆರಂಭದಿಂದಲೂ ಇದ್ದಳೆಂದು ತಿಳಿಯುತ್ತದೆ. ಸಂಗಮ ಅರಸ ಪ್ರೌಢದೇವರಾಯನು ಅನ್ಯ ದೇವಾಲಯಗಳಿಗೆ ನೀಡಿದ ಪ್ರೋತ್ಸಾಹವನ್ನು ನಗರದೇವತೆಗೂ ನೀಡಿರುವುದು ತಿಳಿದುಬರುತ್ತದೆ. ಇದುವರೆಗೂ ಕೇವಲ ಜಾನಪದ ನೆಲೆಯಲ್ಲಿಯೇ ಅಧ್ಯಯನಕ್ಕೆ ಒಳಗಾಗಿದ್ದ ಎಲ್ಲಮ್ಮಳಿಗೆ ಶಾಸನದ ಬೆಂಬಲವೂ ದೊರೆತಿರುವುದು ಈ ದೇವತೆಯ ಪ್ರಭಾವಕ್ಕೆ ಸಾಕ್ಷಿಯಾಗಿದೆ.

ಪ್ರತಿ ಭರತಹುಣ್ಣಿಮೆ ಮತ್ತು ದಸರಾ ಸಮಯದಲ್ಲಿ ಈ ದೇವಿಯ ಜಾತ್ರೆ ನಡೆಯುತ್ತದೆ. ದಸರಾ ಸಮಯದಲ್ಲಿ ದೇವಿಯ ಘಟಸ್ಥಾಪನೆ ಮಾಡುವರು. ದುರ್ಗಾಷ್ಟಮಿಯ ದಿವಸದಂದು ಚಂಡಿಹೋಮ ನಡೆಸುತ್ತಾರೆ. ಅಂದು ರಾಜ ವಂಶಸ್ಥರ (ಆನೆಗೊಂದಿ ಅರಸರ ವಂಶಸ್ಥರು) ಸಮ್ಮುಖದಲ್ಲಿ ಪೂಜಾ ಕಾರ್ಯಗಳು ನಡೆಯುತ್ತವೆ. ಅಂದು ಭಕ್ತರು ಮಹಾನವಮಿದಿಬ್ಬಕ್ಕೆ ದೇವಿಯ ಪಲ್ಲಕ್ಕಿಯನ್ನು ತೆಗೆದುಕೊಂಡುಹೋಗಿ ಬನ್ನಿಕೊಟ್ಟು ಬರುತ್ತಾರೆ. ಅಂದು ಸಂಜೆ ವೇಳೆಗೆ ಗುಡಿಯೊಳಗೆ ಉಡುಕೆ ಸಾಮಾನುಗಳನ್ನು(ಉಡಿತುಂಬುವ ಅಕ್ಕಿ, ಖಣ, ಬಳೆಗಳು, ಹರಿಷಿಣ–ಕುಂಕುಮ, ಎಲೆ–ಅಡಕೆ ಮುಂತಾದ ವಸ್ತುಗಳು) ಬದಲಾವಣೆ ಮಾಡಿಕೊಳ್ಳುವರು.

ವಿಜಯನಗರದ ಅರಸರು ಯುದ್ಧಗಳಿಗೆ ಹೊರಡುವಾಗ ರಣವೀಳ್ಯ ಪಡೆದು ಈ ದೇವತೆಯು ಆಶೀರ್ವಾದ ಪಡೆದು ಹೊರಡುತ್ತಿದ್ದರೆಂಬ ಐತಿಹ್ಯವುಂಟು. ಪ್ರತಿಬಾರಿಯೂ ಯುದ್ಧಕ್ಕೆ ಹೊರಡುವಾಗ ಸೈನಿಕರಿಗೆ ಮತ್ತು ಅರಸರಿಗೆ ರಕ್ತದ ತಿಲಕ ಇಟ್ಟು ಕಳುಹಿಸುತ್ತಿದ್ದರೆಂಬ ಐತಿಹ್ಯವಿದೆ. ಇದಕ್ಕಾಗಿ 250 ಕೋಣಗಳನ್ನೂ, 4500 ಹೋತಗಳನ್ನೂ ಬಲಿಕೊಡುತ್ತಿದ್ದ ರಂತೆ. ಯುದ್ಧದಲ್ಲಿ ಹೋರಾಡಲು ಏಕಾಗ್ರತೆ ಬರಲೆಂದು ಹೀಗೆ ಮಾಡುತ್ತಿದ್ದರಂತೆ.



ಯಾವುದೇ ಇಂದಿಗೂ ಮಂಗಳವಾರ, ಶುಕ್ರವಾರ ಮತ್ತು ಅಮಾವಾಸ್ಯೆಗಳಂದು ವಿಶೇಷ ಪೂಜೆ ಇರುತ್ತದೆ. ಹಂಪಿ ಜಾತ್ರೆ ಮತ್ತು ಫಲಪೂಜೆಯ ದಿನದಂದು ಉತ್ತರ ಕರ್ನಾಟಕದಿಂದ, ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರ ಮುಂತಾದ ಸ್ಥಳಗಳಿಂದ ನೂರಾರು ಒಕ್ಕಲುಗಳು ಮತ್ತು ಭಕ್ತರು ಆಗಮಿಸಿ ಆಚರಣೆಗಳನ್ನು ನಡೆಸುತ್ತಾರೆ. ಸುತ್ತ ಮುತ್ತಲ ಗ್ರಾಮಸ್ಥರು ಕುಟುಂಬ ಸಮೇತ ಆಗಮಿಸಿ ಕುರಿ–ಕೋಳಿಗಳನ್ನು ಬಲಿಕೊಟ್ಟು ಅಡುಗೆ ಮಾಡಿ ದೇವಿಗೆ ಎಡೆ ಇಟ್ಟು, ಪೂಜೆ ಮಾಡಿಸಿ ನಂತರ ಊಟಮಾಡುವ ಆಚರಣೆ ಸಾಮಾನ್ಯವಾಗಿದೆ.

ಈ ಪಟ್ಟಣದ ಎಲ್ಲಮ್ಮಳು ಹಂಪಿ ನಗರದ ರಕ್ಷಣಾ ದೇವತೆಯೆಂಬ ನಂಬಿಕೆ ಇಂದಿಗೂ ಜನಪದರಲ್ಲಿದೆ. ಈ ದೇವಿಯ ಮೂರ್ತಿಯ ಕಾಲ ಕ್ರಿ.ಶ.13 ಅಥವಾ 14ನೇ ಶತಮಾನ ಎಂದು ತೀರ್ಮಾನಿಸಬಹುದು. ಕಪ್ಪು ಶಿಲೆಯ ಸುಮಾರು ಒಂದೂವರೆ ಅಡಿ ಪೀಠದ ಮೇಲೆ ಕುಳಿತಿರುವ ದೇವಿಯು ಸುಮಾರು ಆರು ಅಡಿ ಎತ್ತರ ಮತ್ತು ನಾಲ್ಕು ಅಡಿ ಅಗಲವಾಗಿದೆ. ಚತುರ್ಭಜಳಾದ ದೇವಿಯ ತೋಳುಗಳಲ್ಲಿ ನಾಗಬಂಧಗಳಿವೆ. ಕೈಗಳಲ್ಲಿ ಢಮರುಗ, ಖಡ್ಗ, ತ್ರಿಶೂಲ ಮತ್ತು ಕಪಾಲವನ್ನು ಹಿಡಿದಿರುವಳು. ಎರಡು ಕೋರೇಹಲ್ಲುಗಳಿಂದ ಕೂಡಿದ, ಕಿವಿಗಳಲ್ಲಿ ದೊಡ್ಡದಾದ ಆಭರಣಗಳನ್ನು ಧರಿಸಿದ ಮತ್ತು ಗಂಭೀರವಾದ ಮುಖವನ್ನು ಹೊಂದಿರುವ ವಿಗ್ರಹವು ಉದ್ದವಾದ ಕಿರೀಟವನ್ನು ಧರಿಸಿದ್ದು ನೋಡುಗರಲ್ಲಿ ಭಕ್ತಿಯನ್ನು ಮೂಡಿಸುತ್ತದೆ. ಕೊರಳಿಗೆ ಉದ್ದವಾದ ನವರುಂಡಮಾಲೆಯನ್ನು ಧರಿಸಿದ್ದು ಉಬ್ಬಿದ ಸ್ತನಗಳು ಮತ್ತು ಸಣ್ಣ ನಡುವನ್ನು ಹೊಂದಿದ್ದು, ಪೀಠದಲ್ಲಿ ಸಿಂಹ, ಎಡ–ಬಲಗಳಲ್ಲಿ ಎರಡು ತಲೆಗಳನ್ನು ಚಿತ್ರಿಸಿದ್ದು ಶತ್ರುವಿನ ತಲೆಯ ಮೇಲೆ ಬಲಗಾಲನ್ನಿಟ್ಟು ಕುಳಿತ ಶೈಲಿಯಲ್ಲಿದೆ. ಒಟ್ಟಾರೆಯಾಗಿ ವಿಜಯನಗರ ಶೈಲಿಯ ಸುಂದರ ಮೂರ್ತಿ ಇದಾಗಿದೆ. ಗರ್ಭಗುಡಿಯ ಹೊರಗೆ ಎಡಭಾಗದಲ್ಲಿ ಒಂದೂವರೆ ಅಡಿ ಎತ್ತರದ ಶಿಲೆಯ ಮೇಲೆ ಬಲಕೈಯಲ್ಲಿ ಉದ್ದನೆಯ ತ್ರಿಶೂಲವನ್ನು ಹಿಡಿದ ಚಂಡಿಯ ಶಿಲ್ಪವಿದೆ. ದೇವಾಲಯದೊಳಗಿನ ಕಂಭಗಳು ಶೈಲಿಯಿಂದ 15ನೇ ಶತಮಾನದ್ದಾಗಿದ್ದು ಸಾಧಾರಣ ಉಬ್ಬುಶಿಲ್ಪಗಳಿಂದ ಕೂಡಿವೆ. ಸಂಗಮರ ಕಾಲದ ಈ ದೇವಾಲಯದ ಹೊರಗೋಡೆಯು ಸರಳವಾಗಿದ್ದು ದೇವಾಲಯವು ಕಾಲಕ್ರಮೇಣ ನವೀಕರಣಗೊಂಡಿದೆ. ದೇವಾಲಯದ ಒಳಭಾಗದ ಗೋಡೆಗಳು ಆಧುನೀಕರಣಗೊಂಡಿದೆ.



ಕಮಲಾಪುರದ ಕುರುಬ ಸಮಾಜದ ತುರುಬಿನವರ ಪಂಗಡದ ಪೂಜಾರ್ ಸಿದ್ದೇಶ್ ಅವರ ಕುಟುಂಬವು ತಲೆ ತಲಾಂತರದಿಂದಲೂ ಈ ದೇವಿಯ ಪೂಜಾರಿಗಳಾಗಿ ಸೇವೆ ಸಲ್ಲಿಸುತ್ತಿರುವರು.

ದೇವಿಯ ಮುಂದಿನ ಕಪ್ಪುಕಲ್ಲಿನ ಅಗಲವಾದ ಪೀಠದ ಮಧ್ಯಭಾಗದಲ್ಲಿ ಅರಸನಂತೆ ಕುಳಿತ ಒಬ್ಬ ವ್ಯಕ್ತಿ ತನ್ನ ಮುಂದೆ ವಿನೀತನಾಗಿ ನಿಂತ ವ್ಯಕ್ತಿಗೆ ವಸ್ತ್ರವನ್ನು ದಾನ ನೀಡುತ್ತಿರುವ ಉಬ್ಬುಶಿಲ್ಪವಿದೆ. ಕುಳಿತ ವ್ಯಕ್ತಿ ಕಾಲಮೇಲೆ ಕಾಲುಹಾಕಿಕೊಂಡು ಕುಳಿತಿರುವ ಶೈಲಿ ವಿಶೇಷವಾಗಿದ್ದು ಅವನು ಪ್ರಭಾವಶಾಲಿ ವ್ಯಕ್ತಿಯಂತೆ ತೋರುತ್ತದೆ. ಪ್ರೌಢದೇವರಾಯನು ಎಲ್ಲಮ್ಮ ದೇವಿಯ ಮೂರ್ತಿಯನ್ನು ಪ್ರತಿಷ್ಠಾಪಿಸಿ ಆ ಸಮಯದಲ್ಲಿ ದೇವಾಲಯದ ಮುಖಂಡನಿಗೋ ಅಥವಾ ಮೂರ್ತಿಯನ್ನು/ದೇವಾಲಯವನ್ನು ನಿರ್ಮಿಸಿದ ಶಿಲ್ಪಗೋ ವಸ್ತ್ರವನ್ನು ದಾನ ಕೊಡುತ್ತಿರುವುದನ್ನು ಚಿತ್ರಿಸಿರಬೇಕು.



### ಈ ಶಾಸನದ ಮಹತ್ವವನ್ನು ಮತ್ತೊಮ್ಮೆ ಸಂಕ್ಷಿಪ್ತವಾಗಿ ಹೀಗೆ ವಿವರಿಸಬಹುದು.

1. ಈ ಶಾಸನವನ್ನು ಪ್ರೌಢದೇವರಾಯನು ಹಾಕಿಸಿರುವುದು
2. ಯೆಲ್ಲಮ್ಮಳಿಗೆ ಹತ್ತು ಕೊಳಗ ಬೀಜ ಬಿತ್ತುವಷ್ಟು ಗದ್ದೆಯನ್ನು ನೀಡಿರುವುದು
3. ಈ ಯೆಲ್ಲಮ್ಮಳು ಹಿರಿಯ ಅರಮನೆಯ ಆವರಣದಲ್ಲಿ (ಆಸುಪಾಸಿನಲ್ಲಿ) ಇದ್ದಳು
4. ಪಟ್ಟಣದ ಎಲ್ಲಮ್ಮಳ ಬಗ್ಗೆ ದೊರೆತ ಮೊದಲ ಮತ್ತು ಏಕೈಕ ಶಾಸನ ಇದಾಗಿದೆ
5. ಎಲ್ಲಮ್ಮ ಇದ್ದ ಭಾಗದ ಅರಮನೆ ಹಿರಿಯ ಅರಮನೆಯಾಗಿತ್ತೆಂಬ ಅಂಶದಿಂದ ಕಿರಿಯ ಅರಮನೆಯೂ ಇದ್ದಿರಬೇಕೆಂಬ ಅನುಮಾನಕ್ಕೆ ಅವಕಾಶವಿದೆ.
6. ಸೋಗುಲವಾಡಿ ಎಲ್ಲಮ್ಮ(ಯೆಲ್ಲಂಮ್ಮ) ಎಂದಿರುವುದರಿಂದ ಈ ಹೆಸರಿನ ಬೀದಿಯಲ್ಲಿ ಎಲ್ಲಮ್ಮ ಇದ್ದಳೆಂದು ಹೇಳಬಹುದಾಗಿದೆ.
7. ಎಲ್ಲಮ್ಮ ದೇವಿಯ ಅಧ್ಯಯನಕ್ಕೆ ಜಾನಪದ ಆಕರಗಳಿಗೆ ಬೆಂಬಲವಾಗಿ ಶಾಸನ ಆಕರವೂ ಲಭ್ಯವಾದಂತಾಗಿದೆ.
8. ಕ್ರಿ.ಶ.1425ಕ್ಕೂ ಪೂರ್ವದಲ್ಲೇ ಪಟ್ಟಣದ ಎಲ್ಲಮ್ಮಳ ಪ್ರಭಾವ ಹಂಪಿಯಲ್ಲಿತ್ತು ಎಂಬ ಅಂಶ ತಿಳಿಯುತ್ತದೆ

### ಶಾಸನ ಪಾಠ

1) 0 ಶಾಲಿವಾಹನ ಶಕವರುಷ 13(47)
2) 0 ವಿಶ್ವಾವಸು ಸಂವಛರದ ಪುಶ್ಯ ಶು 15 ಗು(ರು)
3) 0 ವಾರ ಮಕರ ಸಂಕ್ರಾಂತಿ ಪುಣ್ಯ ಕಾಲದ
4) 0 ಲೂ ಶ್ರೀ ಮದ್ರಾಜಾದಿರಾಜ ರಾಜ
5) 0 ಪರಮೇಶ್ವರ ಶ್ರೀ ವೀರಪ್ರತಾಪ
6) 0 ರಾಯಮಹಾರಾಯರೂ ಹಿ
7) 0 ರಿಯರಮನೆಯೊಳಗಣ
8) 0 ಸೋಗುಲವಾಡಿಯ
9) 0 ಶ್ರೀ ಯೆಲ್ಲಂಮಗೆ
10) 0 ರಾಮಾಪುರದ ಸೀಮೆಯೊ
11) 0 ಳಗೆ ಸಲುವ ಮಾಂನ್ಯವಾಗಿ
12) 0 ಕೊಟ್ಟ ಗದ್ದೆ ಹತ್ತು ಕೊಳಗ
13) 0 ಯೀ ಧಂರ್ಮ್ಮಕ್ಕೆ ಆ
14) 0 ರು ತಪಿದರೂ ಕಾ(ಶಿ)
15) 0 ಯಲಿ ಗೋ
16) 0 ಬ್ರಂಹ್ಮತ್ಯ
17) 0 ಮಾಡಿದ ಪಾಪಕೆ ಹೋ
18) 0 ಹರೂ।

ಹಂಪಿ ಟೈಮ್ಸ್
HAMPI TIMES

# ದೇಶದ ಭವಿಷ್ಯಕ್ಕೆ ಅಡಿಪಾಯವಾಗಲಿ ಮತದಾನ

## ನಿತ್ಯ ಪಂಚಾಂಗ

ಮಾಸ: ಚೈತ್ರ । ಸಂವತ್ಸರ: ಕ್ರೋಧಿ

**04–05–2024 – ಶನಿವಾರ**

| | |
|---|---|
| ತಿಥಿ | : ಏಕಾದಶಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಪೂರ್ವಭಾದ್ರಪದ |
| ಯೋಗ | : ಇಂದ್ರ |
| ಕರಣ | : ಭವ |
| ಸೂರ್ಯೋದಯ | : 05:52:51 |
| ಸೂರ್ಯಾಸ್ತ | : 18:54:48 |
| ರಾಹು | : 09:08–10:46 |
| ಯಮಘಂಡ | : 14:02–15:39 |
| ಗುಳಿಕ | : 05:53–07:31 |

## ತುಂಗಭದ್ರಾ ನೀರಿನ ಮಟ್ಟ



**ಶುಕ್ರವಾರ : 03–05–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1577.99 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 120 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 3.567 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1575.72 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 119 ಕ್ಯುಸೆಕ್ |
| ಸಾಮರ್ಥ್ಯ | 2.731 ಟಿಎಂಸಿ |

# ಕನ್ನಡ ಸಾಹಿತ್ಯಕ್ಕೆ ಪಂಚಪದಿಯ ದರ್ಶನ

## ನೂತನ ಪಂಚಪದಿಯ ಆವಿಷ್ಕಾರ: ಗ್ರಾಮೀಣ ಪ್ರತಿಭೆ ಹೆಚ್. ಧನಂಜಯ ಕೊಡುಗೆ

■ ಹಂಪಿ ಟೈಮ್ಸ್ ಕೊಟ್ಟೂರು

ನೂರಾರು ವರ್ಷಗಳ ಇತಿಹಾಸವಿರುವ ಕನ್ನಡ ಸಾಹಿತ್ಯದಲ್ಲಿ ದ್ವಿಪದಿ, ತ್ರಿಪದಿ, ಚೌಪದಿ, ಷಟ್ಪದಿಗಳಿದ್ದು, ಪಂಚಪದಿಯಲ್ಲಿ ಕನ್ನಡ ಸಾಹಿತ್ಯವನ್ನು ಪರಿಚಯಿಸುವ ಮೂಲಕ ಹೊಸ ಶಕೆಯನ್ನು ಆರಂಭಿಸಿರುವುದಾಗಿ ಯುವ ಕವಿ, ನಾಟಕಕಾರ ಹೆಚ್. ಧನಂಜಯ ಹೇಳಿದರು.

ಪಟ್ಟಣದಲ್ಲಿ ತೇರುಬಯಲು ಬಸವೇಶ್ವರ ಸ್ವಾಮಿ ದೇವಾಲಯದಲ್ಲಿ ಡೋಣೂರು ಚಾನುಕೋಟಿ ಮಠವು ಜಗಜ್ಯೋತಿ ಬಸವೇಶ್ವರ ಜಯಂತಿ ಹಾಗೂ ಶ್ರೀಮರುಳಸಿದ್ದೇಶ್ವರ ಸ್ವಾಮಿ ರಥೋತ್ಸವದ ಅಂಗವಾಗಿ ಹಮ್ಮಿಕೊಂಡಿರುವ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಶುಕ್ರವಾರ ಸಂಜೆ ಮಾತನಾಡಿದರು.

ಕನ್ನಡ ಸಾಹಿತ್ಯದಲ್ಲಿ ಪಂಚಪದಿ ಹೊಸ ಆವಿಸ್ಕಾರ. ಕನ್ನಡ ಸಾಹಿತ್ಯದಲ್ಲಿ ಈ ಪ್ರಕಾರ ಇರಲಿಲ್ಲ. ಕನ್ನಡ ಸಾಹಿತ್ಯಕ್ಕೆ ಛಂದಸ್ಸಿನ ಹೊಸ ಲಕ್ಷಣ ಇದು. ಈ ಸೂತ್ರದ ಆಧಾರದ ಮೇಲೆ ಯಾರು ಬೇಕಾದರೂ ಸಾಹಿತ್ಯ ರಚಿಸಬಹುದು ಎಂದು ಸಭೆಯಲ್ಲಿ ಉದಾಹರಣೆ ಸಮೇತ ವಿವರಿಸಿದರು.

ನಾನೇನು ವಿಶ್ವವಿದ್ಯಾಲಯದ ವ್ಯಾಸಂಗ ಮಾಡಿಲ್ಲ. ಕೇವಲ ಪಿಯುಸಿ ಓದಿದ್ದೇನೆ.




ವ್ಯಾಕರಣದಲ್ಲಿ ಅತೀವ ಆಸಕ್ತಿ ಹಾಗೂ ಕನ್ನಡ ಸಾಹಿತ್ಯ ಅಭ್ಯಾಸ ಬಲದಿಂದ ಪಂಚಪದಿಯನ್ನು ಶೋಧಿಸಿರುವುದಕ್ಕೆ ಹೆಮ್ಮೆ ಎನಿಸುತ್ತದೆ ಎಂದರು.

ಈ ಸಂದರ್ಭದಲ್ಲಿ ನಾಟಿ ವೈದ್ಯ ರಾಜಭಕ್ಷಿ ಆರೋಗ್ಯ ರಕ್ಷಣೆ ಸಲಹೆ ನೀಡಿದರು. ಅಂತರಾಷ್ಟ್ರೀಯ ಕ್ರಿಕೆಟ್ ಕ್ರೀಡಾಪಟು ಮತ್ತು ಶಿಕ್ಷಕ ಪ್ರವೀಣ ಕುಮಾರ್, ಅಂಗವಿಕಲನಾದರೂ ಅಂತರಾಷ್ಟ್ರೀಯ ಮಟ್ಟದಲ್ಲಿ ಹೇಗೆ ಕ್ರಿಕೆಟ್ ಪಟುವಾದ ಎಂಬುದನ್ನು ವಿವರಿಸಿದರು.

ಸಾಹಿತಿ ಉಜ್ಜಿನಿ ರುದ್ರಪ್ಪ ಮಾತನಾಡಿದರು, ಶಿಕ್ಷಕ ಕೆ.ಟಿ. ಸಿದ್ದರಾಮೇಶ ಶಿಕ್ಷಣದ ಮಹತ್ವ ಕುರಿತು ಉಪನ್ಯಾಸ ನೀಡಿದರು.

ಡೋಣೂರು ಚಾನುಕೋಟಿ ಮಠದ ಡಾ. ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಕಾರ್ಯಕ್ರಮದ ಸಾನಿಧ್ಯವಹಿಸಿದ್ದರು. ಎಂ.ಎಂ.ಜೆ. ಕಾವ್ಯ ಮತ್ತು ತಂಡದ ವಿದ್ಯಾರ್ಥಿಗಳು ಭರತನಾಟ್ಯ ಪ್ರದರ್ಶಿಸಿದರು. ಶ್ರೀಮಠದ ಶಿಷ್ಯರಿಂದ ಮಂತ್ರಪಠಣ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಶಿಕ್ಷಕ ರಮೇಶ ನಿರೂಪಿಸಿದರು.

# ವಿಜ್ಞಾನ

## ಬೆಣ್ಣೆಯು ಮಜ್ಜಿಗೆಯ ಮೇಲೆ ಏಕೆ ತೇಲುತ್ತದೆ?

■ ಆರ್.ಬಿ.ಗುರುಬಸವರಾಜ

ಪರೀಕ್ಷೆ ಮುಗಿಸಿಕೊಂಡು ನಿರಾಳವಾಗಿ ಓಡಾಡಿಕೊಂಡಿದ್ದ ನವೀನನಿಗೆ ಅಜ್ಜಿ ಒಂದು ಕೆಲಸ ನೀಡಿದಳು. ಒಂದು ಬಾಟಲಿಯನ್ನು ನೀಡಿ ಕೆಲಕಾಲ ಕುಲುಕಲು ತಿಳಿಸಿದಳು. ಅದೊಂದು ಅಗಲ ಬಾಯಿಯುಳ್ಳ ಬಾಟಲಿಯಾಗಿದ್ದು, ಅದರೊಳಗೆ ಹಾಲಿನ ಕೆನೆಯನ್ನು ಹಾಕಿ ಮುಚ್ಚಳವನ್ನು ಬಿಗಿಯಾಗಿ ಮುಚ್ಚಲಾಗಿತ್ತು. ನವೀನನು ಕೆಲಕಾಲ ಕುಲುಕಿದ ನಂತರ ಕೈನೋವು ಬಂದಿತು. "ಅಜ್ಜಿ ತಗೋ ನಿನ್ನ ಬಾಟಲಿ, ನನಗೆ ಕೈನೋವು ಬಂತು" ಎಂದು ಹೇಳುತ್ತಾ ಅಜ್ಜಿಯ ಕೈಗೆ ಬಾಟಲಿ ಕೊಟ್ಟನು. ಅಜ್ಜಿ ಅದರ ಮುಚ್ಚಳ ತೆರೆದು ನೋಡಿದಳು. ಬೆಣ್ಣೆ ಮೇಲೆ ತೇಲುತ್ತಿತ್ತು. 'ಬೆಣ್ಣೆ ತಯಾರಿಸಿದ್ದಕ್ಕೆ ಥ್ಯಾಂಕ್ಸ್ ಕಣೋ' ಎಂದಳು. "ಹೌದಾ, ನನಗೂ ಸ್ವಲ್ಪ ತೋರಿಸು" ಎಂದನು. ಅಜ್ಜಿ ಬಾಟಲಿಯನ್ನು ಅವನ ಮುಂದೆ ಹಿಡಿದಳು. ಬೆಣ್ಣೆ ಮೇಲೆ ತೇಲುವುದನ್ನು ಗಮನಿಸಿದ ನವೀನ "ಅಜ್ಜಿ, ಬೆಣ್ಣೆ ಏಕೆ ಮಜ್ಜಿಗೆಯ ಮೇಲೆ ತೇಲುತ್ತದೆ?" ಎಂದ. ಅಜ್ಜಿ ತನಗೆ ತಿಳಿದ ವಿಷಯವನ್ನು ಮೊಮ್ಮಗನಿಗೆ ತಿಳಿಸಿದಳು.



ಬೆಣ್ಣೆಯು ಮಜ್ಜಿಗೆಗಿಂತ ಕಡಿಮೆ ಸಾಂದ್ರತೆ ಹೊಂದಿರುವ ಕಾರಣ ಅದು ಮಜ್ಜಿಗೆಯ ಮೇಲೆ ತೇಲುತ್ತದೆ. ತೈಲವು ನೀರಿನ ಮೇಲೆ ಹೇಗೆ ತೇಲುತ್ತದೆಯೋ ಹಾಗೆ ಬೆಣ್ಣೆ ಮಜ್ಜಿಗೆಯ ಮೇಲೆ ತೇಲುತ್ತದೆ. ಬೆಣ್ಣೆಯಲ್ಲಿರುವ ಕೊಬ್ಬಿನ ಅಣುಗಳು ಮಜ್ಜಿಗೆಯಲ್ಲಿರುವ ನೀರಿನ ಅಣುಗಳಿಗಿಂತ ಕಡಿಮೆ ಸಾಂದ್ರತೆಯನ್ನು ಹೊಂದಿವೆ. ಆದ್ದರಿಂದ ಬೆಣ್ಣೆಯು ಮಜ್ಜಿಗೆಯ ಮೇಲೆ ತೇಲುತ್ತದೆ.

ಬೆಣ್ಣೆಯನ್ನು ಕೆನೆಯಿಂದ ತಯಾರಿಸಲಾಗುತ್ತದೆ. ಇದು ಕೊಬ್ಬು ಮತ್ತು ನೀರಿನ ಮಿಶ್ರಣವಾಗಿದೆ. ಕೆನೆಯನ್ನು ಮಂಥನ ಮಾಡಿದಾಗ ಕೊಬ್ಬಿನ ಅಣುಗಳು ಒಟ್ಟಿಗೆ ಸೇರಿಕೊಳ್ಳುತ್ತವೆ ಮತ್ತು ನೀರಿನಿಂದ ಬೇರ್ಪಟ್ಟು ಬೆಣ್ಣೆಯನ್ನು ರೂಪಿಸುತ್ತವೆ. ಬೆಣ್ಣೆಯು ಹೆಚ್ಚಾಗಿ ಕೊಬ್ಬಿನಿಂದ ಕೂಡಿದೆ. ಆದರೆ ಮಜ್ಜಿಗೆ ನೀರು, ಪ್ರೋಟೀನ್ ಮತ್ತು ಸ್ವಲ್ಪ ಪ್ರಮಾಣದ ಕೊಬ್ಬನ್ನು ಒಳಗೊಂಡಿರುವ ದ್ರವವಾಗಿದೆ. ಬೆಣ್ಣೆ ಮತ್ತು ಮಜ್ಜಿಗೆಯ ನಡುವಿನ ಸಾಂದ್ರತೆಯ ವ್ಯತ್ಯಾಸದಿಂದ ಬೆಣ್ಣೆ ಮಜ್ಜಿಗೆಯ ಮೇಲೆ ತೇಲುತ್ತದೆ.

ಅಜ್ಜಿಯ ಮಾತುಗಳನ್ನು ಕೇಳಿದ ನವೀನ ಮಜ್ಜಿಗೆ ಕುಡಿಯಲು ಆಸೆ ವ್ಯಕ್ತಪಡಿಸಿದ. ಅಜ್ಜಿ ಅವನ ಆಸೆಯಂತೆ ಕುಡಿಯಲು ಮಜ್ಜಿಗೆ ನೀಡಿದಳು.

# ಚುನಾವಣೆ: ಮದ್ಯ ಮಾರಾಟ ನಿಷೇಧ

■ ಹಂಪಿ ಟೈಮ್ಸ್ ಹೊಸಪೇಟೆ

ಲೋಕಸಭಾ ಸಾರ್ವತ್ರಿಕ ಚುನಾವಣೆ–2024ರ ಮತದಾನವು ಮೇ 07ರಂದು ನಡೆಯಲಿದ್ದು, ಈ ಹಿನ್ನೆಲೆಯಲ್ಲಿ ವಿಜಯನಗರ ಜಿಲ್ಲೆಯ 05 ವಿಧಾನಸಭಾ ಕ್ಷೇತ್ರದ ವ್ಯಾಪಿಯಲ್ಲಿ ಮತದಾನ ಪ್ರಕ್ರಿಯೆಯು ಮುಕ್ತ, ಶಾಂತಿಯುತ ಹಾಗೂ ಸುಸೂತ್ರವಾಗಿ ನಡೆಯಲು ಅನುಕೂಲವಾಗುವಂತೆ ಹಾಗೂ ಯಾವುದೇ ರೀತಿಯ ಅಹಿತಕರ ಘಟನೆಗಳು ಸಂಭವಿಸದಂತೆ ವಿಜಯನಗರ ಜಿಲ್ಲೆಯಾದ್ಯಂತ ಮೇ 05ರ ಸಂಜೆ 06 ಗಂಟೆಯಿಂದ ಮೇ 07ರ ಮಧ್ಯರಾತ್ರಿ 12 ಗಂಟೆಯವರೆಗೆ ಎಲ್ಲಾ ಬಗೆಯ ಮದ್ಯದ ಅಂಗಡಿಗಳನ್ನು ಮುಚ್ಚುವಂತೆ ಹಾಗೂ ಮದ್ಯ ಮಾರಾಟ, ತಯಾರಿಕೆ ಮತ್ತು ಮದ್ಯ ಸಾಗಾಣಿಕೆ ನಿಷೇಧಿಸಿ ಒಣ ದಿನ ಎಂದು ಘೋಷಿಸಿ ಜಿಲ್ಲಾ ಚುನಾವಣಾಧಿಕಾರಿಗಳು ಆಗಿರುವ ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ಆದೇಶ ಹೊರಡಿಸಿದ್ದಾರೆ.

ಪ್ರಜಾ ಪ್ರಾತಿನಿಧಿ ಕಾಯ್ದೆ 1951ರ ಸೆಕ್ಷನ್ 135(ಸಿ) ಹಾಗೂ ಕರ್ನಾಟಕ ಅಬಕಾರಿ ಸನ್ನದುಗಳು (ಸಾಮಾನ್ಯ ಷರತ್ತುಗಳು) ನಿಯಮ 1967ರ ಅಧಿನಿಯಮ 10 (ಬಿ) ರಡಿಯಲ್ಲಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಈ ಆದೇಶ ಹೊರಡಿಸಿದ್ದು, ಈ ದಿನಗಳಂದು ಯಾವುದೇ ತರಹದ ಬಾರ್ ಅಂಡ್ ರೆಸ್ಟೋರೆಂಟ್, ಕ್ಲಬ್ ಮತ್ತು ಹೋಟಲ್ ಅಥವಾ ಡಾಬಾಗಳಲ್ಲಿ ಹಾಗೂ ಇತರೆ ಸಾರ್ವಜನಿಕ ಅಥವಾ ಖಾಸಗಿ ಸ್ಥಳಗಲ್ಲಿ ಮದ್ಯ ಸಾಗಾಣಿಕೆ, ಶೇಖರಣೆ ಮತ್ತು ಮದ್ಯ ಮಾರಾಟ ಮಾಡುವುದನ್ನು ನಿಷೇಧಿಸಲಾಗಿದೆ. ವಿಜಯನಗರ ಜಿಲ್ಲೆಯ ಪೊಲೀಸ್ ಅಧೀಕ್ಷಕರು ಹಾಗೂ ಅಬಕಾರಿ ಇಲಾಖೆಯ ಅಬಕಾರಿ ಉಪ ಆಯುಕ್ತರು ಈ ಆದೇಶವನ್ನು ಅನುಷ್ಠಾನಕ್ಕೆ ತರಲು ಅಗತ್ಯ ಕಟ್ಟುನಿಟ್ಟಿನ ಕ್ರಮಗಳನ್ನು ಜರುಗಿಸಬೇಕು ಎಂದು ಜಿಲ್ಲಾಧಿಕಾರಿಗಳು ಆದೇಶದಲ್ಲಿ ತಿಳಿಸಿದ್ದಾರೆ.

# ಮತದಾರರ ಅನುಕೂಲಕ್ಕಾಗಿ ಕೊಪ್ಪಳ ನಗರದ ರೈಲ್ವೆ ಗೇಟ್ ಸಂಖ್ಯೆ 66ರ ರಸ್ತೆ ಒಪನ್

■ ಹಂಪಿ ಟೈಮ್ಸ್ ಕೊಪ್ಪಳ

ಲೋಕಸಭಾ ಚುನಾವಣೆ–2024ರ ಹಿನ್ನೆಲೆಯಲ್ಲಿ ಕೊಪ್ಪಳ ಲೋಕಸಭಾ ಕ್ಷೇತ್ರಕ್ಕೆ ಮೇ 7ರಂದು ಮತದಾನ ನಡೆಯಲಿದ್ದು, ಮೇ 6 ಮತ್ತು 7ರಂದು ಕೊಪ್ಪಳ ನಗರದ ರೈಲ್ವೆ ಗೇಟ್ ಸಂಖ್ಯೆ 66ರ ರಸ್ತೆ ಒಪನ್ ಆಗಿರುತ್ತದೆ ಎಂದು ಜಿಲ್ಲಾ ಚುನಾವಣಾಧಿಕಾರಿ ನಲಿನ್ ಅತುಲ್ ತಿಳಿಸಿದ್ದಾರೆ.

ಕೊಪ್ಪಳ ನಗರದ ಕುಷ್ಟಗಿ ರಸ್ತೆಯ ರೈಲ್ವೆ ಗೇಟ್ ಸಂಖ್ಯೆ 66ರಲ್ಲಿ ರೈಲ್ವೆ ಮೆಲ್ಸೇತುವ ನಿರ್ಮಾಣ ಕಾಮಗಾರಿ ನಡೆಯುತ್ತಿದ್ದು, ಈ ರೈಲ್ವೆ ಲೈನ್ ಎರಡು ಬದಿಯ ಏರಿಯಾಗಳಲ್ಲಿ ಮತಗಟ್ಟೆಗಳಿದ್ದು ಮತದಾನ ಪ್ರಯುಕ್ತ ಸಾರ್ವಜನಿಕರಿಗೆ ಮತದಾನ ಮಾಡಲು ಅನುವುಮಾಡಿಕೊಡಲು ಈ ಮಾರ್ಗದಲ್ಲಿ ವಾಹನಗಳ ಓಡಾಟಕ್ಕೆ ಮುಕ್ತ ಅವಕಾಶವಿದ್ದು, 66ರ ರೈಲ್ವೆ ಗೇಟ್ ತೆರಿದಿರುತ್ತದೆ. ಸಾರ್ವಜನಿಕರು ತಮ್ಮ ವಾಹನಗಳ ಮೂಲಕ ಸಂಚರಿಸಬಹುದಾಗಿದೆ ಎಂದು ತಿಳಿಸಿದ್ದಾರೆ.

# ಗೃಹರಕ್ಷಕರಿಂದ ಮತದಾನ ಜಾಗೃತಿ

■ ಹಂಪಿ ಟೈಮ್ಸ್ ಹರಪನಹಳ್ಳಿ:

ಅಖಿಲ ಭಾರತ ಗೃಹರಕ್ಷಕ ದಳ ವತಿಯಿಂದ ಮತದಾನ ಜಾಗೃತಿ ಕಾರ್ಯಕ್ರಮ ಅಮ್ಮಿಕೊಳ್ಳಲಾಯಿತು ಈ ಕಾರ್ಯಕ್ರಮ ವನ್ನು ಪುರಸಭೆ ಮುಖ್ಯ ಅಧಿಕಾರಿಯಾದ ಎರಿಗುಡಿ ಶಿವಕುಮಾರ್ ರವರು ಚಾಲನೆ ನೀಡಿದರು

ಪಟ್ಟಣದ ಹಳೆ ಬಸ್ ನಿಲ್ದಾಣ ದಿಂದ ಮತದಾನ ಜಾಗೃತಿ ಜಾತಾ ಆರಂಭಗೊಂಡು ಸುಣಗಾರ ಗೆರಿ ಐ ಬಿ ವೃತ್ತ ಹಾಗೂ ಬಣಗಾರ್ ಪಟೇ ಟಾಕೀಸ್ ರೋಡ್ ಹೊಸ ಬಸ್ ನಿಲ್ದಾಣ ಹಾಗೂ ಪ್ರಮುಖ ಭೀದಿಗಳಲ್ಲಿ ಸಾರ್ವಜನಿಕರಿಗೆ ಮತದಾನದ ಅರಿವು ಮೂಡಿಸಿದರು

ವೀರಣ್ಣ ಲಕ್ಕಣ್ಣ ನವರು ತಾಲೂಕು ಪಂಚಾಯಿತಿ ಸಹಾಯಕ ನಿರ್ದೇಶಕರು. ಎಸ್ ಎಂ ಮಲ್ಲಿಕಾರ್ಜುನಯ್ಯ ಘಟಕ ಅಧಿಕಾರಿಗಳು. ಎಂ ಮಾಲತೇಶ್ ಹಿರಿಯ ಅಧಿಕಾರಿಗಳು. ಪಿ ವಾಗೀಶ್ ಹಿರಿಯ ಅಧಿಕಾರಿಗಳು.ಕೆ ಶುಭಾಷ್ ಹಾಗೂ ಗೃಹ ರಕ್ಷಕ ಎಸ್ ಹಾಲಸ್ವಾಮಿ ಗೃಹ ರಕ್ಷಕ ಕೆ ಕೋಟೆಪ್ಪ ಹಾಗೂ ಎಲ್ಲಾ ಸಿಬ್ಬಂದಿಗಳು ಪಾಲ್ಗೊಂಡಿದ್ದರು

# ಕೈಮಗ್ಗ ತಂತ್ರಜ್ಞಾನದಲ್ಲಿ ಡಿಪ್ಲೋಮಾ ಕೋರ್ಸ್ ಪ್ರವೇಶಕ್ಕಾಗಿ ಅರ್ಜಿ ಆಹ್ವಾನ

ಹಂಪಿ ಟೈಮ್ಸ್ ಬಳ್ಳಾರಿ

2024–25ನೇ ಸಾಲಿಗೆ ಕೈಮಗ್ಗ ಮತ್ತು ಜವಳಿ ತಂತ್ರಜ್ಞಾನದಲ್ಲಿ ಡಿಪ್ಲೋಮಾ ಕೋರ್ಸ್ ಕಲಿಕೆಗಾಗಿ 44 ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಕೈಮಗ್ಗ ಮತ್ತು ಜವಳಿ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಇಂಗ್ಲಿಷ್‌ನ್ನು ಒಂದು ವಿಷಯವಾಗಿ ಅಭ್ಯಸಿಸಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.

ವ್ಯಾಸಂಗದ ಸಮಯದಲ್ಲಿ ಮಾರ್ಗಸೂಚಿಯ ಪ್ರಕಾರ ಪ್ರತಿ ವಿದ್ಯಾರ್ಥಿಗೆ, ಪ್ರತಿ ತಿಂಗಳು ರೂ.2,500 ರಂತೆ ಶಿಷ್ಯವೇತನ ನೀಡಲಾಗುವುದು ಹಾಗೂ ಪುರುಷ ಅಭ್ಯರ್ಥಿಗಳಿಗೆ ವಸತಿ ನಿಲಯದ ಸೌಲಭ್ಯವನ್ನು ಹಣ ಪಾವತಿಸುವ ಆಧಾರದ ಮೇಲೆ ಕಲ್ಪಿಸಲಾಗುವುದು.

ಸಾಮಾನ್ಯ ವರ್ಗದ ಅಭ್ಯರ್ಥಿಗಳು ಜು.01ಕ್ಕೆ ಅನ್ವಯಿಸುವಂತೆ 15 ರಿಂದ 23 ವರ್ಷ ವಯೋಮಿತಿಯಲ್ಲಿರಬೇಕು ಹಾಗೂ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ವರ್ಗದ ಅಭ್ಯರ್ಥಿಗಳು 15 ರಿಂದ 25ರ ವಯೋಮಿತಿಯಲ್ಲಿರಬೇಕು. ಅರ್ಹತಾ ಪರೀಕ್ಷೆಯಲ್ಲಿ ಗಳಿಸಿರುವ ಕ್ರೂಢೀಕೃತ ಅಂಕಗಳು ಮೆರಿಟ್ ಲೆಕ್ಕಾಚಾರಕ್ಕೆ ಆಧಾರವಾಗಿರುತ್ತದೆ.

ಭರ್ತಿ ಮಾಡಿದ ಅರ್ಜಿಗಳನ್ನು ಅಗತ್ಯ ದಾಖಲಾತಿಗಳೊಂದಿಗೆ ಮೇ 28 ರೊಳಗಾಗಿ ಕಚೇರಿಗೆ ಸಲ್ಲಿಸಬೇಕು. ಅರ್ಜಿಗಳನ್ನು https://khtigadag.ac.in/Admissionform.pdf ಲಿಂಕ್‌ನಲ್ಲಿ ಡೌನ್‌ಲೊಡ್ ಮಾಡಿಕೊಳ್ಳಬಹುದು.

**ಡಿಪ್ಲೋಮಾ ಕೋರ್ಸ್‌ಗಳಿಗೆ ಲಭ್ಯವಿರುವ ಸಂಸ್ಥೆಗಳ ವಿವರ:**

ಕರ್ನಾಟಕ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ಗದಗ–ಬೆಟಗೇರಿ (ಕರ್ನಾಟಕ) – 22 ಅಭ್ಯರ್ಥಿಗಳು, ಭಾರತಿಯ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ಸೇಲಂ (ತಮಿಳುನಾಡು) – 17 ಅಭ್ಯರ್ಥಿಗಳು, ಎಸ್.ಪಿ.ಕೆ.ಎಂ. ಭಾರತಿಯ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ವೆಂಕಟಗಿರಿ (ನೆಲ್ಲೂರು ಜಿಲ್ಲೆ, ಆಂಧ್ರಪ್ರದೇಶ) – 03 ಅಭ್ಯರ್ಥಿಗಳು, ಭಾರತಿಯ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ಕಣ್ಣೂರು (ಕೇರಳ) – 02 ಅಭ್ಯರ್ಥಿಗಳು ಸೇರಿದಂತೆ ಒಟ್ಟು 44 ಅಭ್ಯರ್ಥಿಗಳ ಸೀಟ್‌ಗಳನ್ನು ಕಾಯ್ದಿರಿಸಲಾಗಿದೆ. ಮೆರಿಟ್ ಆಧಾರದ ಮೇಲೆ ಅರ್ಹ ಅಭ್ಯರ್ಥಿಗಳನ್ನು ಆಯಾ ಡಿಪ್ಲೋಮಾ ಸಂಸ್ಥೆಗಳಲ್ಲಿ ಕೋರ್ಸ್ ಪ್ರವೇಶ ಕುರಿತಂತೆ ಕೌನ್ಸಲಿಂಗ್‌ಗಾಗಿ ಕರೆಯಲಾಗುವುದು.

# ಉತ್ತಮ ನಾಯಕನ ಆಯ್ಕೆ ಮತದಾರನ ಆದ್ಯ ಕರ್ತವ್ಯ

## ಪ್ರತಿಯೊಬ್ಬರು ವಿವೇಚನೆಯಿಂದ ಮತ ಚಲಾಯಿಸಿ: ಜಿಪಂ ಸಿಇಒ ರಾಹುಲ್ ಶರಣಪ್ಪ ಸಂಕನೂರ

■ ಹಂಪಿ ಟೈಮ್ಸ್ ಬಳ್ಳಾರಿ

ಮೇ 07 ರಂದು ನಡೆಯುವ ಲೋಕಸಭೆ ಚುನಾವಣೆಗೆ ಪ್ರತಿಯೊಬ್ಬರೂ ವಿವೇಚನೆಯಿಂದ ಮತ ಚಲಾಯಿಸಿ, ಉತ್ತಮ ನಾಯಕರನ್ನು ಆಯ್ಕೆ ಮಾಡಬೇಕು ಎಂದು ಜಿಲ್ಲಾ ಸ್ವೀಪ್ ಸಮಿತಿಯ ನೋಡೆಲ್ ಅಧಿಕಾರಿ ಆದ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಸ್ವೀಪ್ ಸಮಿತಿ ಹಾಗೂ ಬಳ್ಳಾರಿ ತಾಲ್ಲೂಕು ಆಡಳಿತ, ತಾಲ್ಲೂಕು ಸ್ವೀಪ್ ಸಮಿತಿ ಇವರ ಆಶ್ರಯದಲ್ಲಿ ಹಲಕುಂದಿ ಗ್ರಾಮದ ಮನರೇಗಾ ಕಾರ್ಮಿಕರಿಗೆ ಶುಕ್ರವಾರ ಏರ್ಪಡಿಸಿದ್ದ ಮತದಾನ ಜಾಗೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಮತದಾನ ಪ್ರತಿಯೊಬ್ಬ ಪ್ರಜೆಯ ಮೂಲ ಹಕ್ಕು. ಉತ್ತಮ ನಾಯಕನ ಆಯ್ಕೆ ಪ್ರತಿಯೊಬ್ಬ ಮತದಾರನ ಆದ್ಯ ಕರ್ತವ್ಯ. ನಿಮ್ಮ ಅಮೂಲ್ಯವಾದ ಮತವನ್ನು ಯಾವುದೇ ಆಸೆ–ಆಮಿಷಗಳಿಗೆ ಒಳಗಾಗಿ ಮಾರಿಕೊಳ್ಳಬೇಡಿ ಎಂದರು.

ಚುನಾವಣಾ ಹಬ್ಬವು, ಎಲ್ಲರ ಮನೆಯ ಹಬ್ಬವಿದ್ದಂತೆ. ಪ್ರತಿಯೊಬ್ಬರೂ ಪಾಲ್ಗೊಂಡು ಮತದಾನ ಮಾಡುವ ಮೂಲಕ ಶೇಕಡವಾರು ಮತದಾನ ಪ್ರಮಾಣ ಹೆಚ್ಚಳಕ್ಕೆ ಸಹಕರಿಸಬೇಕು




ಎಂದು ಕರೆ ನೀಡಿದರು.

ಮೇ 7 ರಂದು ನಡೆಯುವ ಮತದಾನ ದಿನದಂದು ಜಿಲ್ಲೆಯ ಎಲ್ಲಾ ಮತದಾನ ಕೇಂದ್ರಗಳಲ್ಲಿ ನೆರಳು, ಕುಡಿಯವ ನೀರು, ಶೌಚಾಲಯಗಳು ವ್ಯವಸ್ಥೆ ಹಾಗೂ ವಿಶೇಷವಾಗಿ ವೃದ್ದರು, ಅಂಗವಿಕಲರು ಹಾಗೂ ಗರ್ಭಿಣಿಯರಿಗೆ ವಿಶೇಷ ಲೈನ್ ವ್ಯವಸ್ಥೆ ಮಾಡಲಾಗಿದ್ದು, ಇದರ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಮತದಾನ ದಿನದಂದು ಬಿಸಿಲು ಹೆಚ್ಚಿರುವುದರಿಂದ ಆದಷ್ಟು ಬೆಳಗಿನ ಅವಧಿಯಲ್ಲಿಯೇ ಮತದಾನ ಮಾಡಬೇಕು ಎಂದರು.

ಕಾರ್ಯಕ್ರಮದಲ್ಲಿ ಬಳ್ಳಾರಿ ತಾಲ್ಲೂಕು ಸ್ವೀಪ್ ನೋಡೆಲ್ ಅಧಿಕಾರಿ ಹಾಗೂ ತಾಪಂ ಇಒ ಮಡಗಿನ ಬಸಪ್ಪ, ಪಿಡಿಓ ಪ್ರಭಾಕರ್, ಐಇಸಿ ರಮೇಶ್, ಟಿಸಿ ಮಹಾಂತೇಶ, ಟಿಎಮ್‌ಐಎಸ್ ಶೇಖರ್ ರೆಡ್ಡಿ, ಬಿಲ್ ಕಲೆಕ್ಟರ್ ಕೊಟ್ರಯ್ಯ, ಡಿಇಓ ರಾಜು ಸೇರಿದಂತೆ ಸುಮಾರು 700 ನರೇಗಾ ಕಾರ್ಮಿಕರು ಭಾಗವಹಿಸಿದ್ದರು.





ಬಳ್ಳಾರಿಯಲ್ಲಿ ಮತದಾನ ಪ್ರಮಾಣ ಹೆಚ್ಚಳವಾಗಲು ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ ಬಳ್ಳಾರಿ ಮಹಾನಗರ ಪಾಲಿಕೆ ಆವರಣದಿಂದ ಜರುಗಿದ ಪಂಜಿನ ಹಾಗೂ ಮೇಣದ ಮೆರವಣಿಗೆಯಲ್ಲಿ ಮತದಾನ ಜಾಗೃತಿ ಮೂಡಿಸಿದರು.



ಹರಪನಹಳ್ಳಿಯಲ್ಲಿ ಅಖಿಲ ಭಾರತ ಗೃಹರಕ್ಷಕ ದಳ ವತಿಯಿಂದ ಮತದಾನ ಜಾಗೃತಿ ನಡೆಯಿತು.




Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA